ಅಪರಂಜಿ

ಆಗಸ್ಟ್ 97

ತಿಳಿನಗೆಯ ಕಾರಂಜಿ



ಪ್ರಕಾಶ್

ಭೂಷಿ

ಓ ಹೆನ್ರಿ

ಬಿಂಡಿಗನವಿಲೆ ಭಗವಾನ್

ಶಿವು

ವೈ ನಾರಾಯಣ ಶರ್ಮ

ಕಮಲಾ ರಾಮಸ್ವಾಮಿ

ಹೆಚ್. ಗೋಪಾಲಕೃಷ್ಣ

ಬೇಲೂರು ರಾಮಮೂರ್ತಿ

ಹೆಚ್. ವೆಂಕಟಸುಬ್ಬಯ್ಯ

ಗೋವಿಂದ್ ಹೆಗ್ಡೆ

ಬಿಡಿ : ಪ್ರತಿ 3 ರೂ 50 ಪೈ



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 14 **ಆಗಸ್ಟ್ 97** **ಸಂಚಿಕೆ- 11**

ತದ್ವನವೆಂಬುದು ಅದರ ಹೆಸರು. ತದ್ವನವೆಂದು ಅದರ ಉಪಾಸನೆ ಮಾಡಬೇಕು. ಆವನನ್ನು ಎಲ್ಲ ಭೂತಗಳೂ ಪ್ರೀತಿಸುತ್ತವೆ


- ಕಠ

ಬ್ರಹ್ಮವು ಎಲ್ಲಕ್ಕೂ ಆತ್ಮವಾದುದರಿಂದ ಅದನ್ನು ಭಜಿಸಬೇಕು. ಹೀಗೆಂದು ಉಪಾಸನೆ ಮಾಡಿದವನು ಸರ್ವಭೂತಗಳಿಗೂ ಪ್ರಿಯನಾಗುತ್ತಾನೆ ಎಂದು ಉಪನಿಷತ್ತು ಹೇಳುತ್ತದೆ.

ದಾಖಲೆಯಲ್ಲೇನೋ ಅದು ನಗರ, ನಗರ ಮಧ್ಯ. ಆದರೆ ಅಲ್ಲಿ ವನವೊಂದು ನಿರ್ಮಿತವಾಗಿದೆ. ಯಾವ ನಾಗರಿಕ ವರ್ತನೆಯೂ ಇಲ್ಲ. ಬೀದಿಗಳಲ್ಲೇ ವನ್ಯ ಸಂಘರ್ಷ ಏರ್ಪಟ್ಟೀತೆಂಬ ಬೆದರಿಕೆ. ತನ್ನ ಬುಡ ಭದ್ರವಿಲ್ಲದ ಅಧಿಕಾರ ನೆಗೆದುಬಿದ್ದೀತೆಂಬ ಭಯದಿಂದ ಅಂತಹ ವರ್ತನೆಗೂ ಮನ್ನಣೆ. ಏಕೆ ಗೊತ್ತೇ? ಮನೆಗೆ, ಸರೋವರಕ್ಕೆ ಬೆಂಕಿ ಬಿದ್ದಿದೆ. ಆದಷ್ಟು ಗಳಗಳನ್ನು ಹಿರಿದುಕೊಂಡು, ನೀರಿನ ಬದಲು ಅದರ ಪ್ರಾಸವಿರುವುದನ್ನು ಗುಟುಕರಿಸಿಕೊಂಡುಬಿಟ್ಟರೆ ತಾವು ಎಂದರೆ ಇಡೀ ನಾಡೇ ಉದ್ಧಾರವಾಗಿಬಿಡುತ್ತದೆ.

ಸಹಸ್ರ ಸಹಸ್ರ ಅಜ್ಞಾತ ದೇಶಭಕ್ತರೇ ಸ್ವಾತಂತ್ರ್ಯಕ್ಕಾಗಿ ನೀವು ಬಲಿದಾನ ಕೊಟ್ಟುದು ಸಾರ್ಥಕವಾಯಿತು. ನೀವು ಧನ್ಯರು. ನಾವೂ ಕೂಡಾ?

ಶಾಂತಿ, ಅಹಿಂಸೆ, ಸ್ವರಾಜ್ಯ, ಸುರಾಜ್ಯ, ರಾಮರಾಜ್ಯ ಎಂದು ಹಂಬಲಿಸಿ, ಕಣ್ಣೆದಿರಿನಲ್ಲಿ ದೇಶ ಹೋಳಾದುದನ್ನು ಕಂಡ ಮಹಾತ್ಮನೇ ನೀನು ಧನ್ಯ! ಇಂತಹದನ್ನು ನೋಡಲಿಲ್ಲ ನೀನು. ವಿದೇಶೀಯರೇ ನಿಮಗೆ ಧಿಕ್ಕಾರ. ನೀವು ಭಾರತದ ಸಂಪತ್ತನ್ನು ಕೊಳ್ಳೆಹೊಡೆದ ಗುಳ್ಳೆನರಿಗಳು. ನಮ್ಮ ಸಂಪತ್ತನ್ನು ನಮ್ಮವರೇ ಕೊಳ್ಳೆಹೊಡೆಯಲು ನೀವು ಶತಮಾನಗಳ ಕಾಲ ಅವಕಾಶ ಕೊಡಲಿಲ್ಲ.



ಉದಾತ್ತ ಚಿಂತನೆ ಭಾರತದಲ್ಲಿಲ್ಲಿತ್ತು? ಸೆಕ್ಯುಲರಿಸಂ ಅನ್ನು ನಮ್ಮ ಸಂವಿಧಾನ ನಿರ್ಮಾತೃಗಳು ಉದ್ಭವಿಸುವಂತೆ ಮಾಡಿದರು. ಆದರಿಂದಾಗಿ ಇದೆಲ್ಲಾ ಸಾಧ್ಯವಾಯಿತು. ಭಾರತದ ಸಂಪತ್ತು ಭಾರತೀಯರ ಕೈಗೆ ಎಷ್ಟು ಜೋರಾಗಿ ಮೇಲಿಂದ ಉದುರುತ್ತಿದೆ! ಅವರ ಕೈಯಲ್ಲಿರುವ ಚಿಪ್ಪು ಅದನ್ನು ಸಂಗ್ರಹಿಸೀತೇ?

ಎಲ್ಲಕ್ಕೂ ಕೊನೆಯಿದೆ ಎನ್ನುವುದು ನಿಯಮ. ಆದರಂತೆ ನಮ್ಮ ಈ ಸ್ಥಿತಿಗೂ ಕೊನೆಯಿರಲೇಬೇಕು. ಅದನ್ನು ನಂಬಿ ಅಪರಂಜಿ ಧೈರ್ಯದಿಂದ ನಗುತ್ತಿದ್ದಾಳೆ.



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್

ಚಂದಾ ವಿವರ:
ಬಿಡಿ ಪ್ರತಿ: ರೂ. 3.50
ವಾರ್ಷಿಕ ಚಂದಾ: ರೂ. 35
ಆಜೀವ ಚಂದಾ : ರೂ. 350

ವಿಳಾಸ: ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು- 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 14 ಆಗಸ್ಟ್ '97 ಸಂಚಿಕೆ 11

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



○ಪ್ರಕಾಶ್

ರೋಗಗ್ರಸ್ಥ ಹೋಮಿಯೋಪತಿ ಕಾಲೇಜು

- ಪತ್ರಿಕೆ

ಟೀಕೆ ಅನಗತ್ಯ!!

★★★

ವಿಂಬಲ್ಡನ್‌ನಲ್ಲಿ ಮಳೆ

-ಕ್ರೀಡಾ ಸುದ್ದಿ

ಕ್ರಿಕೆಟ್ ಜ್ವರ ಟೆನಿಸ್‌ಗೂ ಹರಡಿದೆ!!

★★★

ಧರ್ಮಕಾರಣ ಮತ್ತೆ ಪ್ರಸರಣಕ್ಕೆ

- ಸುದ್ದಿ

ಇದರಿಂದ ಅಧರ್ಮ ಬೆಳವಣಿಗೆಗಳಾಗದಿರಲಿ!!

★★★

ಬಿಹಾರದ ಬಗ್ಗೆ ಕಿಡಿ ಹಾರಿಸಲೂ

ಯಾಕೋ ಭಯವಾಗುತ್ತೆ!!

★★★

ಕಂಪ್ಯೂಟರ್ ಸೈನ್ಸ್; ಕೃಪಾಂಕಕ್ಕೆ ಆಗ್ರಹ

-ಸುದ್ದಿ

ಈ ಕ್ಷೇತ್ರದಲ್ಲೂ 'ಎಂಟರ್' ಕೃಪಾಂಕ!!

★★★

ವಿಮಾನ ನಿಲ್ದಾಣಕ್ಕೆ ವಿಮಾನಖಾತೆ ಸಚಿವೆ ಭೇಟಿ - ಪತ್ರಿಕೆ

ಇದು 'ಸುದ್ದಿ' ಹೇಗಾಯಿತು??

★★★

ನಗರಕ್ಕೆ ಮಾಜಿ ಪ್ರಧಾನಿ ಭೇಟಿ - ಸುದ್ದಿ

ಟ್ರಾಫಿಕ್ ಪೋಲೀಸರು ಮೀಸೆಗಳ ಹಿಂದೆಯೇ ನಕ್ಕರಂತೆ!!

★★★

ಪಾಕಿಸ್ಥಾನದ ಹೃದ್ರೋಗ ತಜ್ಞನ ಜತೆ ಡಯಾನಾ ವಿವಾಹ?? -ಸುದ್ದಿ

ಅರ್ಥಗರ್ಭಿತ ಸುದ್ದಿ!!

★★★

ಮಹದೇವ ಗಿರಣಿ ಮುಚ್ಚಲು ನಿರ್ಧಾರ - ಪತ್ರಿಕೆ

ಹರ, ಹರಾ!!

★★★



''ಇಲ್ಲಾ ಸ್ವಾಮಿ, ಖಂಡಿತವಾಗ್ಲೂ Star News Interview ನಲ್ಲಿ ನಾನು ರಾಬ್ರಿದೇವಿಗೆ Prompt ಮಾಡ್ಲಿಲ್ಲ''

ಬಾಲಲೀಲೆ

ಭೂಷಿ

'ಚಿಂಡಿಟ್' camp ಮುಗಿದ ಮೇಲೆ ನಮ್ಮ training ಮುಗಿದ ಹಾಗೇ. Passing out parade ಒಂದೇ ಬಾಕಿ. ಅದಕ್ಕಾಗಿ ಸತತ ಅಭ್ಯಾಸ ಅಷ್ಟೇ. ಈ ದಿನಗಳಲ್ಲಿ ಹೇಳಿಕೊಳ್ಳುವಂಥಹ ಘಟನೆಗಳು ಏನೂ ನಡೆಯಲಿಲ್ಲ. ಅದೂ ಅಲ್ಲದೆ, ಅಧಿಕಾರಿಗಳಾಗಿ ಹೊರಬರುವ ಕನಸಿನಲ್ಲಿ cadetಗಳಂತೆ ಹುಡುಗಾಟ ಆಡುವ ಅಭ್ಯಾಸ ಮುದುರಿಕೊಂಡಿತ್ತು.

Parade ದಿನ ಗರಿಗರಿ uniform ಹಾಕಿ, ಪಥಸಂಚಲನಮಾಡಿ ಆಮೇಲೆ ಮೂವರು ಮೂವರಾಗಿ ಮಂದಗತಿಯಲ್ಲಿ (slow march) ಬಹಳ ಭಾವುಕವಾದ "aulde lange sayne' ("should old acquaintances be forgotten...') ಎಂಬ ವಿದಾಯದ ಗೀತೆಯನ್ನು ಅನುಸರಿಸಿ, ಕಡೆಯಬಾರಿ academy ಲಾಂಛನಕ್ಕೆ salute ಮಾಡಿ, ಕಟ್ಟಡದ porch ಮೂಲಕ ಮೆಟ್ಟಿಲುಗಳನ್ನು ನಿಧಾನವಾಗಿ ಏರಿ, ಅದರ ಮಹಾದ್ವಾರವನ್ನು ದಾಟಿದೊಡನೆ ಆದ ಅನುಭವ ಅವರ್ಣನೀಯ. ನಾವುಗಳು ಆ ಕ್ಷಣದಲ್ಲಿ ಅಧಿಕಾರಿಗಳಾಗಿ ಮಾರ್ಪಟ್ಟೆವೆಂಬುದನ್ನು ಮನದಟ್ಟು ಮಾಡಿ ಕೊಡುವುದಕ್ಕೆಂದೇ ಏನೋ rifle ಹೆಗಲಿನಿಂದ ಕೆಳಗಿರಿಸಿ 'ಅಬ್ಬ' ಎಂದು ನಿಟ್ಟುಸಿರು ಬಿಡುವುದರ ಒಳಗೆ "Congradulations Sir' ಅಂತ ನಮ್ಮನ್ನು parade groundನಲ್ಲಿ ಗೋಳು ಹುಯಿದುಕೊಳ್ಳುತ್ತಿದ್ದ ಬ್ರಿಟಿಷ್ NCOಗಳೂ, 'ಮುಬಾರಕ್ ಹೋ ಸಾಬ್' ಅಂತ JCOಗಳೂ ಸಾಲಾಗಿ ನಿಂತು "attention'ಗೆ ಬಂದು ಒಬ್ಬೊಬ್ಬರ ಕೈಯನ್ನೂ ಕುಲುಕಿ ಶುಭಾಶಯಗಳನ್ನು ಕೋರಿದಾಗ ಆದ ಆಹ್ಲಾದ ಸಹ ಅವರ್ಣನೀಯ. ಒಂದು ವರ್ಷದ ಅಕಾಡೆಮಿ ವಾಸ, ತ್ರಾಸ ಎಲ್ಲಾ ತಕ್ಷಣ ಗಾಳಿಯಲ್ಲಿ ತೂರಿ ಹೋದಂತೆ ಭಾಸವಾಯಿತು. ಅನ್ನಿ.

ನಾವು 33 ಜನ ಜಯಗಳಿಸಿ ಹೊರಗೆ ಬಂದೆವು. 22 ಮಂದಿ EME (Corps of Electrical and Mechanical Engineers), 10 ಮಂದಿ Corps of Engineers (sappers and Miners) ಮತ್ತು ಒಬ್ಬ Corps of Signalsಗೆಂದು ಹಂಚಿಕೊಂಡಿದ್ದಾಗಿತ್ತು. ಒಂದು ವರ್ಷ ಕೂಡಿ ಬಾಳಿದ್ದು ಮುಗಿಯಿತು. ಆದರೆ ಈಗಲೂ ಆ ವರ್ಷದ ಬಾಂಧವ್ಯ ಅಚಲವಾಗಿಯೇ ಉಳಿದಿದೆ. ಅದೇ Academy traningನ ವೈಖರಿ!

ಇಷ್ಟು ಓದಿದ ಮೇಲೆ ಏಕೋ ಈ ಭೂಷಿ ತಿಳಿಹಾಸ್ಯದ ಬದಲು ಭಾವಗೀತೆ try ಮಾಡುತ್ತಿದ್ದಾನೆ ಎಂಬ ಬೇಸರ ಬೇಡ. ಅನುಭವಗಳನ್ನು ನೆನಸಿದಾಗ ಭಾವುಕತೆ ಸಹಜ. ಕ್ಷಮಿಸಿ ತಿಳಿಹಾಸ್ಯಕ್ಕೆ ಬರುವ ಮುನ್ನ ಅಕಾಡೆಮಿ ಉಪಾಖ್ಯಾನದ ಸಣ್ಣ ತುಣುಕನ್ನು ಹೇಳಿ ಮುಂದಿನ ವಿಷಯಕ್ಕೆ ಬರುತ್ತೇನೆ. ಅಕಾಡಮಿಯಲ್ಲಿನ trainingನ ಕಡೆಯ ವೈಶಿಷ್ಟತೆ ಅಂದರೆ, passing outಗೆ ಮೂರು ದಿನ ಮುಂಚೆ ಜೂನಿಯರ್‌ಗಳಿಗೆ,

ಸೀನಿಯರ್‌ಗಳನ್ನುRag ಮಾಡುವ ಅವಕಾಶ ಸಿಗುತ್ತಿತ್ತು. ಅಷ್ಟು ಹೊತ್ತಿಗೆ ಆಗಲೇ ಎಲ್ಲರೂ ಅಕಾಡಮಿ ಸಂಸಾರದಲ್ಲಿ ಕೂಡಿಯೋಗಿದ್ದರೂ ಕೆಲವು ಜೂನಿಯರ್‌ಗಳಿಗೆ ತಮ್ಮ ಮೊದಲ ದಿನಗಳ ಕಹಿ ನೆನಪುಗಳು ಇನ್ನೂ ಉಳಿದಿರುತ್ತಿದ್ದವು. 'ಮುಯ್ಯಿಗೆ ಮುಯ್ಯಿ' ಅಲ್ಲದೇ ಇದ್ದರೂ ತಮ್ಮ ಸೀನಿಯರ್‌ನ್ನ - ಅದರಲ್ಲೂ ಜಾಸ್ತಿ ಕಾಟಕೊಟ್ಟವರನ್ನ, ಸ್ವಲ್ಪವಾದರೂ ಆಟ ಆಡಿಸಿ ಸಂತೋಷಪಟ್ಟು ಕೊಳ್ಳುತ್ತಿದ್ದರು. ನಾವೂ ಸಹ, ಹೊರಬರುವ ಸಂಭ್ರಮದಲ್ಲಿ ಇಂಥಾ ಸಣ್ಣ ಪುಟ್ಟ ಚಿವುಟಿಕೆಗಳನ್ನು ಲೆಕ್ಕಿಸಲಿಲ್ಲ ಅನ್ನಿ.

ಸರಿ.. ಅಕಾಡಮಿಯ ನಂತರ 8 ವಾರ EME School, Kirkee (ಪುಣೆ) ಯಲ್ಲಿ Orientation Cource ಎಂದು ತಿಳಿಸಿದ್ದರು. ಆದರೆ ಅದಕ್ಕೆ ಮುಂಚೆ ಮೂರುವಾರ ರಜೆಯಲ್ಲಿ ಮನೆಗೆ ಹೋಗಿ ಬರುವ ಅವಕಾಶ ವಿಟ್ಟಿದ್ದರು. ನಾನು, ಶೀನು ಮೈಸೂರಿಗೆ ಬಂದು uniformನಲ್ಲಿ ಮೆರೆದಿದ್ದೂ ಮೆರೆದಿದ್ದೇ. ಅವನ ಮನೆ ನಜರ್‌ಬಾದ್‌ನಲ್ಲಾದರೆ, ನನ್ನದು ಒಂಟಿಕೊಪ್ಪಲ್. ಇದ್ದ ಮೂರು ವಾರ ಇಬ್ಬರು ಒಟ್ಟಿಗೆ ಸೈಕಲ್ ಮೇಲೆ ಸುತ್ತಿದ್ದೂ ಸುತ್ತಿದ್ದೆ. ಹೋಟೆಲ್ ಆಗಲಿ, ಸಿನಿಮಾ ಆಗಲಿ uniform ಇಲ್ಲದೇ ಹೋಗುತ್ತಲೇ ಇರಲಿಲ್ಲ. Uniformಗೆ ಆಗ ಅಷ್ಟು ಗೌರವ ಇತ್ತು ಅನ್ನಿ. ಈಗ ಹಾಗೆ ಮಾಡಿದರೆ ಹುಚ್ಚರು ಅನ್ನುತ್ತಾರೆ.... ಆಗ.... ಆ ಕಾಲವೇ ಬೇರೆ.

ಕರ್ಕಿಯಲ್ಲಿ ಸಹ ಯಾವ ಅಪೂರ್ವ ಘಟನೆಗಳೂ ನಡೆಯಲಿಲ್ಲ. ಆಮೇಲೆ ನನ್ನನ್ನು ಅಲ್ಲೇ 512 command workshopಗೆ section officer ಆಗಿ ಹಾಕಿದರು. ಸ್ವಾತಂತ್ರ್ಯದ ಮೊದಲ ವರ್ಷಗಳು.... ಇದ್ದ ಬಹುತೇಕ ಬ್ರಿಟಿಷ್ ಅಧಿಕಾರಿಗಳು ನಮ್ಮ ದೇಶ ಬಿಟ್ಟು ಹೋಗಿದ್ದರಿಂದ ಬೇಕಾದಷ್ಟು ಹುದ್ದೆಗಳು ಖಾಲಿ ಇದ್ದವು. ಅನುಭವ ಏನೂ ಇಲ್ಲದಿದ್ದರೂ ಸಹ ಒಬ್ಬ ನುರಿತ captain ಸ್ಥಾನದಲ್ಲಿ ನಾವು second lientenantಗಳು ಕಾರ್ಯ ನಿರ್ವಹಿಸಬೇಕಾಗಿತ್ತು. ನುರಿತ JCOs ಮತ್ತು NCOs ಇದ್ದುದರಿಂದ ಎಲ್ಲಾ technical ಕಾರ್ಯಗಳೂ ಅವರೇ ನೋಡಿಕೊಳ್ಳುತ್ತಿದ್ದರು. Tank ರಿಪೇರಿ ಆಗಲಿ, ಗನ್ ರಿಪೇರಿ ಆಗಲಿ ಅಷ್ಟೇಕೆ ಮೋಟಾರ್ ಸೈಕಲ್ ಮತ್ತು ಟ್ರಕ್‌ಗಳ ವಿಚಾರ ಸಹಿತ ನಮ್ಮಗಳಿಗೆ ತಿಳಿದಿರಲಿಲ್ಲ. ಹೆಚ್ಚಿಗೆ ಕಾಲ ಮೋಟಾರ್ ಸೈಕಲ್ ಮತ್ತು ಟ್ರಕ್‌ಗಳನ್ನು "on test' ಎಂದು ಓಡಿಸಿ ಡ್ರೈವಿಂಗ್ ಅನುಭವ ಹೆಚ್ಚಿಸಿಕೊಂಡೆ... ಅಷ್ಟೇ.

ಇದೇನು... ಇನ್ನೂ ಮನುಷ್ಯ ಸಪ್ಪೆ ಊಟಾನೇ ತಿನ್ನಿಸಿದ್ದಾನಲ್ಲ... ಮಸಾಲೆಯೇ ಇಲ್ಲ ಅಡಿಗೆಯಲ್ಲಿ ಅಂತ ತಿಳಿದುಕೊಳ್ಳಬೇಡಿ. ಈ ದಿನಗಳಲ್ಲಿ ನಡೆದ ಸ್ವಾರಸ್ಯಕರವಾರ ಘಟನೆ ಒಂದನ್ನು ನಿಮ್ಮ ಮುಂದೆ ಇಡುತ್ತೇನೆ. ಅದರ ಸ್ವಾದವನ್ನು ಸ್ವಲ್ಪ ಅನುಭವಿಸಿ.

ನಮ್ಮ Workshop Commondant (ಈಗ ಅವರನ್ನು Commandant and Managing Director ಎಂದು ಸಂಬೋಧಿಸುತ್ತಾರೆ) ಒಬ್ಬ colonel. ಅವರಿಗೆ ವರ್ಗವಾಗಿ ಬೇರೊಬ್ಬ colonel ಅವರ ಬದಲಿಗೆ ಬಂದರು. ನಮ್ಮ ಹಳೆಯ commandant ಗೆ ವಿದಾಯ ಹೇಳುವುದಕ್ಕೂ, ಹೊಸಬರನ್ನು ಬರಮಾಡಿಕೊಳ್ಳುವುದಕ್ಕೂ ಒಂದು cocktail (ಕೋಳಿಪುಕ್ಕ!?) party ಅಳವಡಿಸಿದ್ದರು. ನಮ್ಮ ಡೆಪ್ಯುಟಿ ಕಮಾಂಡಾಂಟ್ ಮನೆಯಲ್ಲಿ.

ಆತ ಒಬ್ಬ ಬ್ರಿಟಿಷ್ Lientenant Colonel. ಅವರ ಮನೆ ನಮ್ಮ ಆಫೀಸರ್ಸ್ ಮೆಸ್ ಎದುರಿಗೇ ಇತ್ತು. ನಮ್ಮ ವರ್ಕ್‌ಷಾಪ್‌ನಿಂದ ನಾವು ಮೂವರು ಬ್ರಹ್ಮಚಾರಿಗಳು (bachelors) ಮೆಸ್‌ನಲ್ಲಿದ್ದೆವು. ಅಮ್ಮಾವ್ರ ಹುಕುಂ ಬಂತು.... ಪಾರ್ಟಿಗೆ ಅರ್ಧ ಘಂಟೆ ಮುಂಚೆ ಅವರೆದುರು ಹಾಜರಾಗಬೇಕೆಂದು. ಹೋದೆವು. ನಮಗೆ ಬೇಗ ಬರಲು ಆದೇಶ ಹೊರಡಡಿಸಿದ ಮುಖ್ಯ ಉದ್ದೇಶ ಪಾರ್ಟಿಗೆ ಬಂದ ಹೆಂಗಸರುಗಳನ್ನು ನೋಡಿಕೊಳ್ಳಬೇಕೆಂದು ತಾಕೀತು ಮಾಡುವುದಕ್ಕೆ ಎಂದು ವಿವರಿಸಿದರು. ಸಾಮಾನ್ಯವಾಗಿ ಗಂಡಸರ ಕೈನಲ್ಲಿ ಗ್ಲಾಸ್ ಬಂದೊಡನೆ ಔಪಚಾರಿಕವಾಗಿ ಹೆಂಗಸರಿಗೆ 'ಹಲೋ' ಹೇಳಿ, ಬೇಗ ಗಂಡುಪಾಳ್ಯ ಕಟ್ಟಿಕೊಳ್ಳುವ 'ಕೆಟ್ಟ' ಅಭ್ಯಾಸ ಇತ್ತು. ಇದನ್ನು ತಡೆಗಟ್ಟಿ, ಶೈಶವದಲ್ಲೇ ಅಫೀಸರ್‌ಗಳನ್ನು ಪಳಗಿಸುವ ಕಾರ್ಯ ಆಕೆ ತಮ್ಮ ಕೈಯಲ್ಲಿ ತೆಗೆದುಕೊಂಡಿದ್ದರು ಅಂತ ಕಾಣಿಸುತ್ತೆ. ಅಮ್ಮಾವ್ರ ಇರಾದೆ ಇದಾದರೆ, ಅಪ್ಪಾ ಅವರದ್ದೇ ಬೇರೆ ಆಗಿತ್ತು ಅಂತ ಕಾಣುತ್ತೆ. ಸಾಲಾಗಿ ಜೋಡಿಸಿದ್ದ ಬಾಟಲ್‌ಗಳ ಮೇಲೆ ಕಣ್ಣು ಹಾರುತ್ತಲೇ ಇತ್ತು. ಕಡೆಗೆ ತಡೆಯಲಾರದೆಯೇ ಏನೋ 'come on boys let us start the party rolling' ಎಂದು ಆಹ್ವಾನಿಸಿದರು.

ನನಗೆ ಅದುವರೆವಿಗೂ whisky ಕುಡಿದು ಅಭ್ಯಾಸ ಇರಲಿಲ್ಲ. ಒಂದೇ ಒಂದು ಸಲ, ಅಕಾಡಮಿ ಸೇರಿದ ಹೊಸದರಲ್ಲಿ ಕ್ಯಾಂಟೀನ್ ಇಂದ ಒಂದು ಬಾಟಲ್ ಬೀರ್ ಕೊಂಡು, ಕುಡಿದು, ಉಗಿದು ಅಸಹ್ಯ ಪಟ್ಟುಕೊಂಡಿದ್ದೆ.. ಅಷ್ಟೇ (ನಾವು ಅಕಾಡಮಿ ಸೇರುವವರೆವಿಗೂ cadet ಗಳಿಗೆ ರೂ 250/- ಮಾಸಾಶನ ಸಿಗುತ್ತಿತ್ತು ವಾರಕ್ಕೆ ಒಂದು ಸಲ beer ಕುಡಿಯಲು ಅವಕಾಶವಿತ್ತು. ನಾವು ಸೇರಿದ ಮೇಲೆ ಮಾಸಾಶನ ರೂ 75/- ಕ್ಕೆ ಇಳಿಯಿತು. ಅದರಲ್ಲೂ 33 ರೂಪಾಯಿ ಒಂದು ಆಣೆ ಕಡಿತ ಆಗಿ ಬಾಕಿ ಹಣದಲ್ಲಿ canteen coupon ರೂ ನದು ಕೊಟ್ಟು ಕೈಯಲ್ಲಿ ಬಾಕಿ ಕಾಸು ಇಡುತ್ತಿದ್ದರು. ಸೇರಿದ ಒಂದು ತಿಂಗಳು ನಮಗೂ beer ಕೊಳ್ಳಲು ಅವಕಾಶ ಇತ್ತು. ಆಮೇಲೆ cadetಗಳು ಮಾದಕ ಪಾನೀಯಗಳನ್ನು ಸೇವಿಸುವುದನ್ನು ನಿಷೇಧಿಸಿದರು... ಅನ್ನಿ). ಅದು ಹೇಗೇ ಇರಲಿ, ಅಭ್ಯಾಸವಿಲ್ಲದಿದ್ದರೂ... 'ಆಫೀಸರ್ ಆಗಿದ್ದೇನೆ.. ಸೀನಿಯರ್ ಆಫೀಸರ್ ಆಹ್ವಾನಿಸುತ್ತಿದ್ದಾರೆ.. ಬಾಕಿಯವರು ಬಾಯಿ ಚಪ್ಪರಿಸುತ್ತಿದ್ದಾರೆ.. ಅಮ್ಮಾವ್ರು ಯಾವ ತರಹೆಯ ಅಭ್ಯಂತರವನ್ನು ತೋರಿಸುತ್ತಿಲ್ಲ.'.. ಹೀಗಾಗಿ ಮೊದಲನೆ ಡ್ರಿಂಕ್ಸ್ ಕುಡಿದೆ... ಹೇಗಿದ್ದರೇನೆಂತೆ? ಬಾಕಿಯವರು ಸವಿದರು... scotch ಚೆನ್ನಾಗಿದೆ ಅಂದರು.... ಹೌದು ಅಂದೆ.

ಪಾರ್ಟಿಗೆ ಜನ ಬರಲು ಷುರು ಆಯಿತು. ಬಂದವರನ್ನೆಲ್ಲಾ ಕರ್ನಲ್ ಮತ್ತು ಅವರ ಸಹಧರ್ಮಿಣಿ ಸ್ವಾಗತಿಸಿ ಆಸನಾರೂಢರಾಗಿ ಮಾಡಿದ ಮೇಲೆ ಗಂಡಸರು ಸ್ವಾಭಾವಿಕವಾಗಿ ಬಾರ್‌ನತ್ತ ನಡೆದರೆ ನಮ್ಮ duty ಷುರು.. ಹೆಂಗಸರ ಹತ್ತಿರ ಕುಳಿತು.. Good evening madam... my name is....'ಅಂತ ಪರಿಚಯಿಸಿಕೊಂಡ ಮೇಲೆ ಅವರುಗಳೂ ಸಹ ದೇಶಾವಾರದ ನಗೆ ಸೂಸಿ 'ಹಲೋ... how do you do?' ಅಂತ ಅಂದ ಮೇಲೆ ಸಂಭಾಷಣೆ ಮೊಟಕಾಗುತ್ತಿತ್ತು. 5- 10 ನಿಮಿಷ ಗ್ಲಾಸ್ ಕೈನಲ್ಲಿ ತಿರುವುತ್ತಾ ಒಬ್ಬ ರಮಣಿಯು ಬಳಿ ಕುಳಿತು ನೀರವತೆ ಲಾವರಿಸಿದಾಗ... "may I get you a drink,

madam' ಎಂದು ಕೇಳಿ "a soft drink please' ಅಂತ ಕೆಳಿಸಿಕೊಂಡ ಮೇಲೆ, ಬಾರ್‌ಗೆ ಹೋಗಿ ಆಕೆಗೊಂದು soft ನನಗೊಂದು small ತೆಗೆದುಕೊಂಡು ಬಂದು ಆಕೆಯ ಕೈನಲ್ಲಿ ಪಾನೀಯ ಇರಿಸಿ "excuse me' ಅಂತ ಹೇಳಿ ಬೇರೊಬ್ಬ ರಮಣಿಯ ಬಳಿ ತೆರಳಿ, ಆಕೆಯ ಜೊತೆಯಲ್ಲಿ ಕುಳಿತಿರುವ 'ಹಸುಳೆ' ಆಫೀಸರ್‌ಗೆ ಕೇಕ್ ಕೊಟ್ಟು... ಹೀಗೆ ಸುಮಾರು ಒಂದು ಘಂಟೆ ಕಳೆಯಿತು. Cock-tail party ಸಾಮಾನ್ಯವಾಗಿ ಒಂದು ಘಂಟೆ... ಅಬ್ಬಬ್ಬ ಅಂದರೆ 11/2 ಘಂಟೆಗೆ ಸೀಮಿತವಾಗಿರುವುದು ಸಂಪ್ರದಾಯ. ನಂತರ ಮುಖ್ಯ ಅತಿಥಿಗಳ ನಿರ್ಗಮನ... ತದನಂತರ ಬಾಕಿ ಅತಿಥಿಗಳು... seniority ಪ್ರಕಾರ... ನಮ್ಮ ಸರದಿ ಬರುವ ಹೊತ್ತಿಗೆ ಸುಮಾರು 9-30, 10 ಘಂಟೆ ಆಯಿತು ಆಗ ಮತ್ತೆ ಅಪ್ಪಾವ್ರು let us finish the bottle' ಅಂದರು. ಅಳಿದುಳಿದ whisky ಅವರೊಡನೆ ಹಂಚಿಕೊಂಡು ವಿದಾಯ ಹೇಳಿ ಹೊರಡುವ ಹೊತ್ತಿಗೆ ಇನ್ನು ಸ್ವಲ್ಪ ತಡ ಆಯಿತು... ಅನ್ನಿ.

ಸರಿ... ತೂರಾಡಿಕೊಂಡು, ರಸ್ತೆ ದಾಟಿ mess ಒಳಗೆ ಬಂದಾಯಿತು ಅನುಭವಸ್ಥರಾದ ಬಾಕಿ ಇಬ್ಬರು 'ಬ್ರಹ್ಮಚಾರಿಗಳು' 'ಲೋ ಬರೀ ಹೊಟ್ಟೇಲಿ ಮಲಗಬೇಡ... ಊಟ ಮಾಡು ಬಾ..' ಎಂದು ಬಲವಂತ ಮಾಡಿದರು 'ಊಟಾನೂ ಬೇಡ, ಗೀಟಾನೂ ಬೇಡ... ಹಾಸಿಗೆ ಹಿಡಿದರೆ ಸಾಕು..' ಅಂತ ರೂಮಿನ ಜಾಡು ಹಿಡಿದೆ.... ಬೇಸಿಗೆಕಾಲ.. ಬೇರರ್ ಮಂಚ ವರಾಂಡದಲ್ಲಿ ಹಾಕಿ, ಹಾಸಿಗೆ ಸರಿಮಾಡಿ, ಸೊಳ್ಳೆ ಪರದೆ ಕಟ್ಟಿ ಮನೆಗೆ ಹೊರಟು ಹೋಗಿದ್ದ. ಹೇಗೋ ಬಟ್ಟೆ ಬದಲಾಯಿಸಿ, ಪರದೆ ಸರಿಸಿ ಬಿದ್ದುಕೊಂಡೆ.:. ಅಬ್ಬಾ.. ಎಂಥಹ ವಿಚಿತ್ರ ಅನುಭವ.... Fun-World, Essel-World ನಲ್ಲಿ ಇರುವ 'ಟೋರಾ ಟೋರಾ' ತಿರುಗುವಂತೆ ಭೂಮಿ ಎಲ್ಲವೂ ನನ್ನ ಸುತ್ತ ತಿರುಗುತ್ತಿದ್ದಂತೆ ಭಾಸವಾಯಿತು... ದಿಂಬಿನ ಮೇಲೆ ತಲೆ ಇಟ್ಟ ಒಡನೆಯೇ!! ಸಧ್ಯ ಹೊರಗೆ ಮಲಗಿದ್ದುದು ಒಳ್ಳೆಯದೇ ಆಯಿತು. ಪರದೆ ಸರಿಸಿ ಹೊರಗಿದ್ದ ಹೂಗಿಡಗಳ ಪಾತಿ ನನ್ನ ಹೊಟ್ಟೆಯಲ್ಲಿದ್ದ Scotch ಮತ್ತು ಇತರ 'ಹಾಳೂ ಮೂಳೂ' ತಿಂಡಿಗಳ ಅಭಿಷೇಕ ಮಾಡಿದೆ. ಮತ್ತೆ ಸುತ್ತಾಟ.... ಮತ್ತೆ ಅಭಿಷೇಕ... ಹೇಗೋ ನಿದ್ರೆ ಹೋದೆ.

ಬೆಳಿಗ್ಗೆ ಏಳುವಾಗಲೇ ತಲೆ ಸಿಡಿಯುತ್ತಿತ್ತು. Workshop 7.30ಕ್ಕೆ ಷುರು ಆಗುತ್ತಿತ್ತು. ಸಧ್ಯ ಹಿಂದಿನ ದಿನದ ಪಾರ್ಟಿ ನೆಪ.... ಬೆಳಿಗ್ಗೆ 6.30ಕ್ಕೆ PT ಇರಲಿಲ್ಲ. ಆದರೇನು ಎದ್ದರೆ ತಲೆ ಸುತ್ತು. ಏನು ಮಾಡುವುದು ಎಂದು ಯೋಚಿಸುವುದರೊಳಗೆ ಜ್ಞಾಪಕಕ್ಕೆ ಬಂತು... ತಪ್ಪಿಸಿಕೊಳ್ಳುವ ದಾರಿ....

ನನ್ನಂತೆ ಇನ್ನೂ 3,4 ಜನ 'ಹಸುಳೆ' ಆಫೀಸರ್‌ಗಳು Workshop ನಲ್ಲಿದ್ದರು. ಅವರಲ್ಲಿ ಒಬ್ಬ.... ನನಗಿಂತ ಸೀನಿಯರ್... ಮಹಾ ರಸಿಕ.... ಸ್ವಲ್ಪ ಖಯಾಲಿ ಮನುಷ್ಯ ಬೇರೆ... ಹೊಸದಾಗಿ ಮದುವೆ ಆಗಿದ್ದ... ಹೆಂಡತಿಯೂ ಸಹ ಅವನನ್ನು ಕೂಡಿಕೊಂಡಿದ್ದಳು. ಬರುತ್ತಿದ್ದ 350 ರೂಪಾಯಿ ಸಂಬಳ ಮೋಜಿನ ಜೀವನಕ್ಕೆ ಸಾಕಾಗುತ್ತಿರಲಿಲ್ಲ ಅಂತ ಕಾಣುತ್ತೆ. ಪುಣೆಯಲ್ಲಿ Professional money lenders ಹತ್ತಿರ ಸಾಲ ಮಾಡ ಹತ್ತಿದ್ದ... ಸಾಲ ಸುಲಭವಾಗಿ ಸಿಗುತ್ತಿತ್ತು... ಅವರುಗಳೇ ಕರ್ಕಿಗೆ ಬಂದು ಆಫೀಸರ್ಸ್ ಮೆಸ್‌ಗಳಲ್ಲಿ ಸಾಲ offer ಮಾಡುತ್ತಿದ್ದರು. ಹೀಗಾಗಿ ಸಾಲದ ಹೊರೆ ಏರಲು

ಜಾಸ್ತಿ ಕಾಲ ಬೇಕಾಗಲಿಲ್ಲ.

Workshop ನಲ್ಲಿ ಪ್ರತಿ ತಿಂಗಳೂ ಸಂಬಳ ಬಟವಾಡೆ ಮಾಡುವುದು ನನ್ನಂಥ ಜೂನಿಯರ್ ಆಫೀಸರ್ ಕೆಲಸವಾಗಿತ್ತು. ಸಹಾಯಕ್ಕೆ ಒಬ್ಬ Jco ಮತ್ತು ಒಬ್ಬ ಸಿವಿಲಿಯನ್ ಸೂಪರ್‌ವೈಸರ್ ಇರುತ್ತಿದ್ದರು. ನಮ್ಮ ಈ ಕಥಾನಾಯಕ, ನಾನು Workshop ಸೇರುವ 1. 11/2 ತಿಂಗಳು ಮುಂಚೆ ಸಂಬಳ ಬಡವಾಡೆ ಮಾಡಲು ಹಣ ಪಡೆದು, ಬಟವಾಡೆ ಷುರು ಮಾಡಿದ. ಮಧ್ಯದಲ್ಲಿ 'ಸ್ವಲ್ಪ ತಡೀರಿ ಈಗ ಬಂದೆ' ಎಂದು ಎಲ್ಲರನ್ನೂ ಕೂಡಿಸಿ ಹೋದ ಸ್ವಲ್ಪ ಕಾಲವಾದ ಮೇಲೆ ಕಾದಿದ್ದವರಿಗೆ ವಿಷಯ ಗೊತ್ತಾಯಿತು. ಈ 'ರಸಿಕ' ಮಹಾಶಯ ಎದ್ದವನು ಸೀದಾ ಮೋಟಾರ್ ಸೈಕಲ್ ಏರಿ, ಪುಣೆಗೆ ಹೋಗಿ ಸಾಲಗಾರರ ಕಾಟ ಬಿಡಿಸಿಕೊಂಡು ವಾಪಸ್ ಬಂದು Deputy Commandant ಮುಂದೆ ಸೆಟೆದು ನಿಂತು ""Sir, I am Rs. 5000/- short for salary dispersal' ಅಂದ. ""Why? How? ಎಂದು ಅವರು ಕೇಳಿದ್ದಕ್ಕೆ ವಿಷಯ-ತಿಳಿಸಿದ. ಸರಿ ಅವನನ್ನು close arrest ನಲ್ಲಿ ಇಟ್ಟರು. close arrest ಅಂದರೆ House arrest ಥರ. ಅವನ ಮೇಲೆ 24 ಘಂಟೆ ನಿಗಾ ಇಡಲು ಸರಿಸಮಾನ ರ್‍ಯಾಂಕಿನ ಆಫೀಸರ್ ಅನ್ನು ಹಾಕುವುದು ಸಂಪ್ರದಾಯ. ಹೆಂಡತೀನ ಊರಿಗೆ ಕಳುಹಿಸಿ Mess ರೂಂ ನಲ್ಲಿ close arrest ನಲ್ಲಿದ್ದ.

ಆದಿನ ಅಂದರೆ ನನ್ನ ಪಾರ್ಟಿ ದುರಂತದ ಮಾರನೆಯ ದಿನ... ಬೇರೆ ಯಾವುದೋ Unit ನಿಂದ ಬರಬೇಕಾದ escort duty ಆಫೀಸರ್ ಬಂದಿರಲಿಲ್ಲ. ತಕ್ಷಣ ನಾನು ನಮ್ಮ Workshop administrative ಆಫೀಸರ್ ಆಗಿದ್ದ ಮೇಜರ್ ಸಾಹೇಬರಿಗೆ Phone ಮಾಡಿದೆ. ನಾನು ಆದಿನ escort duty ಮಾಡ್ತೀನಿ ಅಂದೆ. ಅವರಿಗಂತೂ ಮಹದಾನಂದವಾಯಿತು. ಏಕೆಂದರೆ ಕಾವಲಿಗೆ ಆಫೀಸರ್ ಒದಗಿಸುವುದು ಪ್ರಯಾಸದ ಕೆಲಸ. ಅದೂ short notice ನಲ್ಲಿ ''ಸರಿ, ಸರಿ. ನೀನು duty ಮಾಡು... ನಾನು order ಹೊರಡಿಸುತ್ತೇನೆ'' ಅಂದರು. ಬದುಕಿದೆಯಾ ಬಡಜೀವವೇ ಅಂತ 'ಬಂದಿ'ಯ ರೂಂಗೆ ಬಂದೆ. ಹಿಂದಿನ ದಿನದ escort duty ಆಫೀಸರ್ ಹೊರಟ. ನಾನು ಬಂದಿಗೆ ಹೇಳಿದೆ ನೋಡು ಮಹಾರಾಯ. ನನ್ನ ತಲೆ ಸಿಡಿಯುತ್ತಿದೆ. ಕೂಡಲು ಸಹ ಕಷ್ಟವಾಗಿದೆ. ಈ duty ಹೇಗೆ ಮಾಡುವುದೋ ಗೊತ್ತಿಲ್ಲ ಅಂದೆ. 'ಏನ್ಸಮಾಚಾರ?' ಅಂದ. ರಾತ್ರಿ ಕಥೆ ಹೇಳಿದೆ. 'ಅಷ್ಟೇ ತಾನೆ' ಅಂದ. ಅನುಭವಸ್ಥ ನೋಡಿ.... ಒಂದು ಗ್ಲಾಸ್ ನೀರಿನಲ್ಲಿ ಒಂದು ಗುಳಿಗೆ ಹಾಕಿದ (Alka Seltzer) ಕಲಕಿದ... 'ಕುಡಿದು ಹಾಯಾಗಿ ಮಲಗು' ಅಂದ. ''ನಾನು ಮಲಗಿದ್ದಾಗ ನೀನು 'ಗಾಯಬ್' ಆಗಬೇಡ.... ನಿನ್ನ ಜಾಗದಲ್ಲಿ ನಾನಿರುವ ಹಾಗೆ ಮಾಡಬೇಡ'' ಅಂದೆ. "Promise' ಅಂದ. ಮಲಗಿದೆ.

ಎದ್ದಾಗ 12 ಅಥವ 12.30 ಇರಬಹುದು ತಲೆಯಲ್ಲಿನ ಅಲೆಗಳೆಲ್ಲಾ ಮಾಯವಾಗಿ ಶುಭ್ರ ನೀಲಿ ಆಕಾಶ ಕಾಣಿಸಿದಂತೆ ಅನುಭವ ಆಯಿತು. ಹೊಟ್ಟೆ ಸಹ ಚುರುಗುಟ್ಟಲು ಷುರು ಆಗಿತ್ತು. ಆದರೂ ಆತಂಕದಿಂದ ಸುತ್ತಲೂ ನೋಡಿದೆ. 'ಬಂದಿ' ಇದ್ದಾನೋ ಇಲ್ಲವೋ ಅಂತ. ಸಧ್ಯ ಇದ್ದ. ಕುರ್ಚಿಯ ಮೇಲೆ ಕೂತಿದ್ದ. ಮುಂದೆ ಟೇಬಲ್ ಮೇಲೆ ಒಂದು ಗ್ಲಾಸ್ beer ಕೈನಲ್ಲಿ ಒಂದು ಸಿಗರೇಟ್... ನಾನು ಕಣ್ಣು ಬಿಟ್ಟೊಡನೆಯೇ

"Breakfast ತಣ್ಣಗಾಗಿದೆ ಆದರೂ ಪರವಾಗಿಲ್ಲ ತಿನ್ನು.... ಊಟ ಆಮೇಲೆ ಮಾಡಿದರಾಯಿತು' ಅಂದ! "Thanks. ಸಧ್ಯ ನೀನು ಕೈಕೊಡಲಿಲ್ಲವಲ್ಲ' ಅಂದೆ. 'ಅರೆ.... ನಿನಗೆ ಕೈಕೊಟ್ಟು 'ಭಗೋಡ' ಆಗುವುದರಲ್ಲಿ ಏನು ಸುಖ ಇದೆ. ತಪ್ಪು ಒಪ್ಪಿಕೊಂಡಿದ್ದೇನೆ... ಸ್ವಲ್ಪ Punishment ಆಮೇಲೆ ಮನೆ.... ಬಳೆ ಅಂಗಡಿ ತೆರೆಯೋಣ ಅಂತ ಯೋಚಿಸುತ್ತಿದ್ದೇನೆ' ಅಂದ. 'ಏನೇ ಆಗಲಿ Thanks once again' ಅಂದೆ. ಬರೀ thanks ನಲ್ಲಿ ಮುಗಿಸಬೇಡ. ಈ beer ಗೆ Sign ಮಾಡು ಸಂಜೆ ಸಿನಿಮಾಗೆ ಕರೆದುಕೊಂಡು ಹೋಗು ಅಂದ. Beer ಗೆ Sign ಮಾಡುವುದು ದೊಡ್ಡ ವಿಷಯವಾಗಿರಲಿಲ್ಲ ಆದರೆ ಸಿನಿಮಾ... ಕಾನೂನು ಬಾಹಿರ ಆದರೆ ನನ್ನನ್ನು ರಕ್ಷಿಸಿದವನಿಗೆ ಇಷ್ಟೂ ಮಾಡಲಾರೆನೇ... ಸಂಜೆ ಸಿನಿಮಾ ಷುರು ಆದಮೇಲೆ ಒಳಗೆ ನುಸುಳಿ, 'ಜನಗಣಮನ' ಬರುವುದಕ್ಕೆ ಮುಂಚೆ (ಆಗ ಇದು ಕಡ್ಡಾಯವಾಗಿತ್ತು), ಹೊರಕ್ಕೆ ಬಂದು, ಸೈಕಲ್ ಏರಿ ರೂಂ ಸೇರಿಕೊಂಡೆವು ಅನ್ನಿ... ಅಂತೂ... ಹುಡುಗು ಬುದ್ಧಿ ಪೂರ್ತಿ ಬಿಟ್ಟಿರಲಿಲ್ಲ ಅಂತ ಸಾಬೀತಾಯಿತು.



"ರಾಬ್ರಿ ಆದ್ಮೇಲೆ, ನಾನ್ಯಾಕಾಗ್ಬಾರ್ದು ಅಂತ ಹಠ ಹಿಡಿದಿದ್ದಾಳಯ್ಯ ನನ್ನ ಹೆಂಡ್ತಿ"

ಆಗಸ್ಟ್ 1947ರ ಕೊರವಂಜಿಯಿಂದ:

ವಾಯು

ಕಿಟಕಿ ಕಂಬಿ ಬಗ್ಗಿಸಿ ತಸ್ಕರ ಮೆಲ್ಲಗೆ ಒಳಕ್ಕಿಳಿದ. ಟಾರ್ಚನ್ನು ಬೆಳಗಿಸಿ ಸುತ್ತ ತಿರುಗಿಸಿದ. ಮಂಚದಮೇಲೆ ದೊಡ್ಡ ಮನುಷ್ಯ ಗಾಢ ನಿದ್ರೆಯಲ್ಲಿದ್ದ. ಮೇಜಿನಮೇಲೆ ಪರ್ಸು, ಚಿನ್ನದ ಸರಪಣಿ ಸಹಿತ ಕೈಗಡಿಯಾಗ, ಬೀಗದಕ್ಕೆ ಗೊಂಚಲು, ಆಸ್ಪ್ರಿನ್ ಡಬ್ಬಿ, ಭಗವದ್ಗೀತೆ, 'ಮನವಾಣಿ' ಪೇಪರು....

ಒಂದು... ಎರಡು ಮೂರು.... ಮೇಜಿನ ಸಮೀಪಕ್ಕೆ ಮೂರು ಹೆಜ್ಜೆಗಳನ್ನಿಟ್ಟ. ಹಾಸಿಗೆ ಮೇಲೆ ಬಿದ್ದಿದ್ದ ದೊಡ್ಡ ಮನುಷ್ಯ 'ಯಾರು?' ಎಂದು ಕೇಳುತ್ತ, ಸ್ವಿಚ್ ಹಾಕಿದ. ತಸ್ಕರನ ಕೈಲಿದ್ದ ಕಬ್ಬಿಣದ ಹಾರೆಯನ್ನು ಅವನು ಮೇಲೆತ್ತಿದ. 'ಮಾತಾಡಬೇಡ' ಎಂದು ಅವನು ತಗ್ಗು ಶ್ರುತಿಯಲ್ಲಿ ಆಜ್ಞಾಪಿಸಿದ. 'ಹಾಗೆಯೇ ಮಲಗಿರು' ಎಂದ. 'ಎರಡು ಕೈಗಳನ್ನೂ ಮೇಲಕ್ಕೆತ್ತಿ ಹಿಡಿ' ಎಂದ.

ದೊಡ್ಡ ಮನುಷ್ಯ ಹೆದರಿ ನಡುಗಿದ. ಬೆವರಲ್ಲಿ ಮುಳುಗಿದ. ಬಲಗೈಯೊಂದನ್ನು ಮಾತ್ರ ಮೇಲೆತ್ತಿ ಹಿಡಿದ.

''ಹುಂ! ಎಡಗೈ! ಮೇಲಕ್ಕೆ ಹೋಗಲಿ... ತಂಟೆಮಾಡಬೇಡ.... ಬುರುಡೆ ಸೀಳಿ ಬಿಡುತ್ತೇನೆ! ಎಡಗೈ!''

ದೊಡ್ಡಮನುಷ್ಯನ ಗಂಡಲು ಗದ್ಗದಿಸಿತು. ''ಆಗೋದಿಲ್ಲಪ್ಪ!'' ಎಂದ.

''ಏಕೆ?''

''ವಾಯು! ತೋಳು ಊದಿಕೊಂಡಿದೆ. ವಿಪರೀತ ನೋವು...''

''ನವೆ ಇದೆಯೇನು?''

''ಇತ್ತು.... ಒಂದು ವಾರದಿಂದ ಕಡಮೆ''

ತಸ್ಕರ ತುಸು ನಕ್ಕ. ದೊಡ್ಡ ಮನುಷ್ಯನಿಗೆ ಕೋಪ ಉಕ್ಕಿ ಬಂತು. ''ಯಾಕಪ್ಪ ನನ್ನ ಅವಸ್ಥೆ ನೋಡಿ ಹಾಸ್ಯಮಾಡುತ್ತೀಯಾ! ಕದಿಯುವುದಕ್ಕೆ ಬಂದವನು ಕದ್ದುಕೊ!... ಅಕೊ!, ಅಲ್ಲೇ ಇದೆಯಲ್ಲಾ, ನಿನಗೆ ಬೇಕಾದದ್ದು.... ಆ ಟ್ರಂಕಿನೊಳಗೆ 60 ರೂ. ಇದೆ; ನನ್ನ ಸಂಬಳದಲ್ಲಿ ಉಳಿದದ್ದು... ಇವತ್ತು 14. ನೋಡಪ್ಪ, ತಾರೀಖು! ಇಂಡಿಯಾ ಡೊಮನಿಯನಾಗುವ ದಿನ ನಾಳೆ ಕೊಂಚ ಮಜಮಾಡು! ನನಗಂತೂ ಹೆಚ್ಚು ತಿರುಗಾಡುವುದಕ್ಕಾಗುವುದಿಲ್ಲ....''

''ನೋಡು! ನನಗೂ ಇದೆ, ಈ ಹಾಳು ಎಡಗೈ ವಾಯು! ಅದಕ್ಕೇನೆ ನನಗೆ ಒಂದೇ ಕೈನ ಬಾವುಟದ ಹಾಗೆ ಎತ್ತಿ ಹಿಡಿದಿರೋ ನಿನ್ನ ನೋಡಿ ನಗು ಬಂದದ್ದು.... ನಗು ಅಲ್ಲ, ಅದು! ಕರುಣೆ ಕಣಯ್ಯ! ನಾಲ್ಕು ವರ್ಷದಿಂದ ನಾನೂ ಅನುಭವಿಸುತ್ತಾ ಇದೇನೆ... ನನ್ನ

ಕಸಬಿಗೂ ಅದಕ್ಕೂ ದಾಯಾದಿ ಸಂಬಂಧ... ಜನ್ಮಕ್ಕಂಟಿದ್ದು, ಹಾಳು''

''ತುಳಸಿ ಸೊಪ್ಪಿನ ರಸ ಹಚ್ಚಿ ನೋಡಪ್ಪ''

''ಅಯ್ಯೋ! ತುಳಸಿ ತೋಟಾನೆಲ್ಲ ಒಂದು ರಾತ್ರಿ ಲೂಟಿ ಮಾಡಿ ಗ್ಯಾಲನ್ ಗಟ್ಟಲೆ ರಸ ಹಿಂಡಿ ಲೇಪಿಸಿದ್ದಾಗಿದೆ.''

''ಕೆಲವರು ಏಕಾಂಬರೇಶ್ವರ ಗುಳಿಗೆ ನುಂಗುತ್ತಾರೆ''

''ಥತ್! ಅದಕ್ಕಿಂತ ಕವಡೆ ನುಂಗಬಹುದು... ಐದು ತಿಂಗಳು ನುಂಗಿದೆ, ದಿನವೊಂದಕ್ಕೆ ನಾಲ್ಕೋ, ಆರೋ! ಏನೂ ಪ್ರಯೋಜನವಿಲ್ಲ. ವಿಶ್ವಗಂಧಿಲೇಹ ಅಂತ ಬಂದಿದೆ. ಅದನ್ನ ಸೇವಿಸಿದಾಗ, ಎರಡು ವಾರ ಕೊಂಚ ಗುಣ ಕಂಡುಬಂತು.... ಮತ್ತೆ ಯಥಾಪ್ರಕಾರ! ನೀವು ಹೇಳಿದ ಹಾಗೆ.... ಎಲ್ಲಿ; ಬಲಗೈನ ಕೆಳಕ್ಕಿಳಿಸಿ, ಪರವಾಗಿಲ್ಲ..... ನೀವು ಹೇಳಿದ ಹಾಗೆ ಊದುವುದು, ಉರಿಯುವುದು, ಪ್ರಾರಂಭ.... ಭುಜಬಲತೈಲವೂ ಅಷ್ಟೆ.... ಶುದ್ಧ ಮೋಸ.... ಅನಿಲಾನಂದ ಅಂತ ಒಬ್ಬರು ಸನ್ಯಾಸಿಗಳು ಕೊಟ್ಟ ಬೂದೀನೇ ನನಗೆ ವಾಸಿ ಎನಿಸಿತು. ಅದನ್ನು ತೋಳಿಗೆ ಬಳಿದರೆ, ಕಿಟಕಿ ಕಂಬಿ ಕೀಳುವಷ್ಟು ಶಕ್ತಿ ಬರುವುದು ನನಗೆ....''

''ನಿಮಗೆ ಬೆಳಗ್ಗೆ ನೋವು ಜಾಸ್ತಿಯೋ, ಸಂಜೆಗೋ?''

''ಸಂಜೆ.... ಅಂದರೆ, ರಾತ್ರಿ... ಆದ್ದರಿಂದಲೇ ತಾಪತ್ರಯ....''

''ನನಗೂ ರಾತ್ರೀನೇ... ಆಫೀಸಲ್ಲಿರುವಾಗ, ಹಾಳು, ನೋವೂ ಇಲ್ಲ ಗೀವೂ ಇಲ್ಲ''

''ಅಲ್ರಿ! ನೀವು ಕುರೀಕೋತಿ ರಸಾಯನ ತಿಂದಿಲ್ಲವೆ?''

''ಇಲ್ಲಪ್ಪ! ನಿಮ್ಮ ತೋಳಿನ ನೋವು ಹೇಗೆ... ಚುಚ್ಚುವ ನೋವೋ, ಉರಿಯುವ ನೋವೋ?''

'ದಬ್ಬಳ ತೆಗಿದು ಚುಚ್ಚುವ ಹಾಗೆ... ಇದ್ದಕ್ಕಿದ್ದ ಹಾಗೆ ಷುರು! ಈಚೆಗೆ ನಾನು ಮಹಡಿ ಮನೆಗಳಿಗೆ ಭೇಟಿ ಕೊಡೋದೇ ಇಲ್ಲವಲ್ಲಾ....ಅಷ್ಟು ಎತ್ತರದಲ್ಲಿರುವಾಗ ತೋಳು ಚಕ್ಕರ್ ಕೊಟ್ಟರೆ, ಗತಿ ಏನು?.... ಒಂದೇ ಮಾತಲ್ಲಿ ಹೇಳಿಬಿಡಲೆ? ಈ ಡಾಕ್ಟರುಗಳಿಗೆ ಏನೂ ಬರದು!''

''ಹೌದು, ಕಣಪ್ಪ! ನಿಜ! ಸಾವಿರಾರು ರೂಪಾಯಿ ಮಾತ್ರ ಸವೆಯಿತು ನನ್ನದು... ಕೆಂಚಗೆ ಕೆಂಡದ ಹಾಗಾಗುತ್ತೆ, ಶನಿ, ಬೆನ್ನೆಲ್ಲ!''

''ಬೆಳಿಗ್ಗೆ? ಹೌದು! ನನಗೂನೂ! ಮಳೇಗಾಲದಲ್ಲಂತೂ...''

''ಹೂ! ಮದ್ರಾಸಲ್ಲಿ ಮಳೆ ಬಿದ್ದರೆ ಸಾಕು, ನನ್ನ ಬೆನ್ನು ಕೆಂಚಗೆ....''

''ಹಾ! ಹಾ! ಹಾಗೆಯೇ, ನನಗೂನೂ!.... ನರಕಯಾತನೆ ಅಂತಾರಲ್ಲಾ, ಅದು ಕಣಪ್ಪ! ಇದು. ಪೋಲೀಸರೂ ಕೂಡ ಇಷ್ಟು ಹಿಂಸೆ ಕೊಡಲಾರರು....''

''ಅದು ನನಗೆ ಗೊತ್ತಿಲ್ಲ... ಅಂತೂ, ನರಕ ಅಂತಾರಲ್ಲಾ, ಅದು ನನಗೇನೋ ಇಲ್ಲೇ... ಈ ತೋಳಿನಮೇಲೆಯೇ...''

''ಅಲ್ರಿ! ಅಂದಹಾಗೆ ನೀವು ಮೊಸಳೆ ಮುಲಾಮು ಏಕೆ ಸವರಬಾರದು?''

''ಹೋಟಲು ಬೆಣ್ಣೆ ವಾಸಿ ಆ ಕೆಸರಿಗಿಂತ!''

''ನಿಜ ಅನ್ನಿ! ಮಾರುವ ಜನ ಮಹಡಿ ಕಟ್ಟಿಕೋತಾರೆ, ಅಷ್ಟೆ; ಅದರಿಂದ ಪ್ರಯೋಜನ! ಹೆಂಡವೊಂದೇ ಇದಕ್ಕೆ ಸಿದ್ಧೌಷಧ! ನೀವು ಬಾಟ್ಲಿಯವರು ಅಂತ ಕಾಣುತ್ತೆ.....''

''ಆಗೊಂದು....ಈಗೊಂದು...''

''ಓ! ಹಾಗಾದರೆ ಬನ್ನಿ.... ಹೋಗೋಣ... ಬಟ್ಟೆ ಹಾಕಿಕೊಳ್ಳಿ....''

''ಕೋಟು ತಗುಲಿಸುವುದಕ್ಕೆ ಬೆಳಗ್ಗೆ ಜವಾನ ಬರಬೇಕು''


''ಬೇಡಿ. ನಾನೇ ಹಾಕುತ್ತೇನೆ..... ಚೂರೀಚೂರ್ಣ ಅಂತ ಒಂದು ಪುಡಿ ಸಿಕ್ಕುತ್ತೆ ಅಂಗಡೀಲಿ..... ಅದನ್ನ ತಂದು ಕೊಬರಿ ಎಣ್ಣೇಲಿ ಕಲಸಿ ಹಚ್ಚಿನೋಡಿ.... ಕೊಂಚ ಶಮನವಾಗುತ್ತೆ ನೋವು.... ನಾನು ಕೆಲವೇಳೆ ತಂದು ಹಚ್ಚುವುದುಂಟು....''

ಇಬ್ಬರೂ ಇಳಿದರು.

''ಮೆಲ್ಲಗೆ.... ಮೆಟ್ಟಲು! ಚೂರೀಚೂರ್ಣವೋ.... ತಂದು ನೋಡುತ್ತೇನೆ, ನಾನೂನು. ಓ! ನನ್ನ ಪರ್ಸು ಮೇಜಿನಮೇಲೆ ಇತ್ತು.... ತರಲು ಮರೆತೆನಲ್ಲಾ.....''

''ಪರವಾಗಿಲ್ಲ; ಬನ್ನಿ! ಇವತ್ತು ನನ್ನ ಖರ್ಚಿನಲ್ಲೇ ಆಗಲಿ, ಬಾಟ್ಲಿ ಬಗ್ಗಿಸೋದು....

(ಓ. ಹೆನ್ರಿಯಿಂದ)



''ನಮ್ಮ ಮನೇಲಿ ಒಬ್ಬೊಬ್ಬರ್ದು ಒಂದೊಂದು ದಿಕ್ಕು. ಅದಕ್ಕೇ ಒಂದು ಯುನೈಟೆಡ್ ಫ್ರಂಟ್ ರಚಿಸಿದ್ದೇನೆ ಮನೇಲಿ''

ಶ್ವಾನ ಪ್ರಸಂಗ

ಬಂಡಿಗನವಿಲೆ ಭಗವಾನ್

ಇಪ್ಪತ್ತೈದು ವರ್ಷದಿಂದ ಮಾರ್ತಾಯಿದೀನಿ, ನಂದು ಇದೇ ಪರ್ಮನೆಂಟ್ ಪ್ಲೇಸು.... ಇರೊದೊಂದೇ ಪೀಸು, ಐಕ್ಲಾಸು ಹೈಬ್ರಿಡ್ಡು ಸಾರ್.....Please hear, dont disappoint ಎಂದು ಮುಂತಾಗಿ ಹರಕು ಇಂಗ್ಲೀಷಿನಲ್ಲಿ ಅಳೆದಿದ್ದ ಆ ಎಂ. ಜಿ. ರೋಡಿನ ಫುಟ್‌ಪಾತಿನ ಡೀಲರ್. ಅಷ್ಟಿಷ್ಟು ಚೌಕಾಸಿ ಮಾಡಿ ಆ ನಾಯಿಮರಿಯನ್ನು ತಂದೆ. ಮಗಳು ದಿವ್ಯಾ ಬೀದಿಯವರನ್ನೆಲ್ಲ ಕನ್ಸಲ್ಟ್ ಮಾಡಿದಳು ಹೆಸರಿಡಲು. ಕೊನೆಗೆ ಎಡಪಕ್ಕದ ಮನೆಯವರು ಹೇಳಿದ ಹೆಸರಿನ ಮೊದಲಕ್ಷರ ಬಲಪಕ್ಕದ ಮನೆಯವರು ಹೇಳಿದ ಹೆಸರಿನ ಕೊನೆಯ ಅಕ್ಷರ ಸೇರಿಸಿ 'ಬೀನೂ' ಎಂದು ನಾಮಕರಣವಾಯಿತು. ನನ್ನಾಕೆಯೂ ಬಹು ಮುತುವರ್ಜಿಯಿಂದ ಬೀನೂಗೆ ಡಯಟ್ ಯೋಜಿಸಿದಳು. ಸಿಹಿಪೊಂಗಲ್, ಪೂರಿ, ಶಾವಿಗೆಬಾತ್ ವಗೈರೆ ಐಟಂಗಳನ್ನು ಮೊದಲು ನನಗೆ ರುಚಿಯಾಗಿದೆಯೆ ಸ್ವಲ್ಪ ನೋಡಿ ಎಂದು ತಿನ್ನಿಸಿ ನಂತರ ಬೀನೂಗೆ ಇಡುತ್ತಿದ್ದಳು! ಬೀನೂನ ವಿವಿಧ ಭಂಗಿಗಳನ್ನು ಸೆರೆಹಿಡಿಯುವ ಗೀಳು ದಿವ್ಯಾಗೆ. ಕೆನಾನ್ ಕ್ಯಾಮರವೇ ಬೇಕು ಅಂದಳು, ತಂದುಕೊಟ್ಟೆ. ಹೀಗೆಯೆ ಸೋಪು, ಬಿಸ್ಕತ್ತು, ತಿಂಗಳಿಗೊಮ್ಮೆ ಹೇರ್‌ಡ್ರೆಸಿಂಗು... ಇತ್ಯಾದಿ ಪೋಷಣೆಯೂ ಸಾಗಿತು.

ಒಂದು ದಿನ ಬೀನೂವನ್ನು ಕಾಂಪೌಂಡಿನಲ್ಲಿ ಕಟ್ಟಿಹಾಕಿ ಎಲ್ಲರೂ ಸಿನಿಮಾಕ್ಕೆ ಹೋದೆವು. ವಾಪಸ್ಸು ಮನೆಗೆ ಬಂದಾಗ ಎದೆ ಡವಡವಕ್ಕೆ ಕಾರಣ ಕಾಂಪೌಂಡಿನಲ್ಲಿ ಒಣ ಹಾಕಿದ್ದ ಎರಡು ಬೆಡ್‌ಶೀಟುಗಳು ಮಾಯ, ಪಾರ್ಕುಮಾಡಿದ್ದ ಸ್ಕೂಟರಿನ ಕನ್ನಡಿ ಕೂಡ ನಾಪತ್ತೆ. ಮುಂಡೇದು.... ನಾನು ಕೂಡ ತಿನ್ನದೆ ಅಷ್ಟು ಚಟ್ನಿನು ಅದಕ್ಕೆ ಹಾಕ್ತಿದ್ದೆ.... ಸ್ವಲ್ಪ ಬೊಗಳಿದ್ರೆ ಅದರ ಗಂಟು ಹೋಗ್ತಿತ್ತ ಎಂದು ಅರ್ಧಾಂಗಿ ಹಪಹಪಿಸಿದಳು.

ಒಡನೆಯೆ ನನ್ನ ದೌಡು ಎಂ.ಜಿ. ರೋಡಿಗೆ. ವಿಷಯವನ್ನು ಆ ಶ್ವಾನವ್ಯಾಪಾರಿಗೆ ಒಪ್ಪಿಸಿದೆ. ಆ ಮಹಾನುಭಾವ ಕೊಂಚಕೂಡ ವಿಚಲಿತನಾಗದೆ ''ಅಯ್ಯೊ Worry No ಸಾಮಿ, ಇದು Oridnary ನಾಯಿ ಅಲ್ಲ rich ಪೀಪಲ್ ನಾಯಿ.... ಅಂಥ ಚಿಲ್ರೆ ಪಲ್ರೆ ಬೆಡ್‌ಶೀಟು, ಕನ್ನಡಿ.... ಬಟನ್ನು, ಹೇರ್‌ಪಿನ್ನಿಗೆಲ್ಲ ತಲೆಬಿಸಿಮಾಡ್ಕೊಳಲ್ಲ....'' ಅನ್ನೋದೇ?

ಅಪ್‌ಟು ಡೇಟ್ ನ್ಯೂಸೆಂದರೆ ಮೂರು ದಿನದಿಂದ ಬೀನೂ ತಪ್ಪಿಸಿಕೊಂಡಿದೆ. ಪೇಪರ್ನಲ್ಲಿ ಆವತ್ತೇ ಮನೆಯವರ ಬಲವಂತಕ್ಕೆ ಜಾಹಿರಾತ್ನು ಹಾಕಿದೆ. ನಿನ್ನೆ ಏನಾಯ್ತು ಗೊತ್ತ? ನಾಯಿಯನ್ನು ಯಾರೋ ತಂದುಕೊಟ್ರು ಅನ್ಕೊಬೇಡಿ, ಅದೇ ಮನೆಗೆ ಬಂತು ಅಂತನೂ ಹೇಳ್ಬೇಡಿ. ಆ ಜಾಹಿರಾತನ್ನ ನೋಡಿದವರು ಒಳ್ಳೆ ಕಸಬುದಾರರೇ ಇರ್ಬೇಕು. ಯಾಕೆ ಅನ್ನಿ, ಕಾಮನ್‌ಸೆನ್ಸ್ ಅವರಲ್ಲಿ ಕೆಲಸ ಮಾಡಿದೆ. ನಿನ್ನೆ ಯಾರೋ ಕಳ್ಳರು ಕಾಂಪೌಂಡಿನೊಳಗೆ ನುಗ್ಗಿ ನನ್ನ ಸ್ಕೂಟರ್‌ನ ಸ್ಟೆಪ್ನಿ ಟೈರ್ ಕಿತ್ಕೊಗೆದಿದ್ದಾರೆ! ನಾಯಿ ಸಾಕೋದು ಸಾಕು, ಜಾಹಿರಾತು ನೀಡೋದು ಸಾಕು.

ಎಚ್ಚೆತ್ತ ಭಾರತ ಎತ್ತ ಸಾಗಿದೆ?

ಶಿವು

ಉತ್ತರ ಗೊತ್ತಿದ್ರೂ, ಗೊತ್ತಿದ್ರೂ ಈ ಪ್ರಶ್ನೆ ಕೇಳ್ತೀರಲ್ಲಾ ಅಂತ ಮೂಗೆಳೆಯಬೇಡಿ. ಇದು ಪ್ರಶ್ನೆ ಅಲ್ಲ. ಐವತ್ತು ವರ್ಷಗಳ ಹಿಂದೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ, ಜಿ.ಪಿ. ರಾಜರತ್ನಂರವರು, ಈ ಶೀರ್ಷಿಕೆ ಇರೋ ಪುಸ್ತಕಾನ ನಮ್ಮ ತಂದೆಗೆ ತಂದುಕೊಟ್ಟಿದ್ದ ನೆನಪು. ಈಗ, ಐವತ್ತು ವರ್ಷಗಳ ನಂತರ, ಲಲ್ಲೂ-ರಾಬರಿ ದಂಪತಿಗಳ ರಾಬರಿ, ದೇಶದ ಸುದ್ದಿ ಮಾಧ್ಯಮಗಳನ್ನೆಲ್ಲಾ ತುಂಬಿರುವ ಈ ಸಂದರ್ಭದಲ್ಲಿ ಇಂತಹ ಮೂಲಭೂತ ಪ್ರಶ್ನೆಗೆ ದೊರಕಬಹುದಾದ ಉತ್ತರದ ಬಗ್ಗೆ ಸಂಶಯವಿರಲು ಸಾಧ್ಯವೇ? ಎಂದು ನೀವು ಆಶ್ಚರ್ಯಪಡಬಹುದು. ನಾನೂ ಪಡುತ್ತಿದ್ದೆ, ಕಳೆದ ವಾರದವರೆಗೂ. ಹೋದವಾರ ಹಲವು ಯುವಕ ಯುವತಿಯರನ್ನು ಭೇಟಿಮಾಡುವ ಅವಕಾಶ ಸಿಕ್ಕಿತು ನನಗೆ. ಆ ಭೇಟಿಗಳ ವಿವರವನ್ನು ನಿಮ್ಮೊಂದಿಗೆ ಹಂಚಿಕೊಳ್ಳೋಣ ಅನ್ನಿಸ್ತಿದೆ. ಇದನ್ನೆಲ್ಲಾ ಓದಿದ ಮೇಲೆ, ನಾವೆಲ್ಲಾ ಎತ್ತ ಸಾಗಿದ್ದೇವೆ, ಸಾಗುತ್ತಿದ್ದೇವೆ, ಸಾಗುತ್ತೇವೆ ಎಂಬುದನ್ನೆಲ್ಲಾ ನೀವೇ ನಿರ್ಧರಿಸಿ.

ನನ್ನ ಮೊದಲ ಭೇಟಿಯಾದದ್ದು ಚಂದ್ರಮೌಳಿಯ ಜೊತೆ. ಆ ಸಂಜೆ ರಾಜಗೋಪಾಲ್ ಮತ್ತು ಶ್ರೀನಾಥ್ ಇಬ್ಬರೂ ನನ್ನನ್ನು ಹರಟೆಗೆ ಕರೆದಿದ್ದರು. ಸ್ವಲ್ಪ ಸಮಯದ ನಂತರ ಚಂದ್ರಮೌಳಿ ನಮ್ಮ ಗುಂಪನ್ನು ಸೇರಿಕೊಂಡ. (ಸೇರಿಕೊಂಡರು ಅನ್ನಬೇಕೇನೋ! ನನಗಿಂತ ಚಿಕ್ಕವರಾದ ಚಿರಂಜೀವಿಗಳನ್ನು ಏಕವಚನದಲ್ಲಿ ಕರೆಯುವುದೇ ಆತ್ಮೀಯ ಅನ್ನಿಸುತ್ತೆ ನನಗೆ). ಚಂದ್ರಮೌಳಿ ISRO ದಲ್ಲಿ ಇಂಜಿನಿಯರ್. ನಗೆ ಸಾಹಿತ್ಯದಲ್ಲಿ ಅಭಿರುಚಿ. ನಾನು ಇತ್ತೀಚೆಗೆ ಬರೆದ ಕಥೆಯೊಂದರ ಭಾಗವನ್ನು ಅವನಿಗೆ ವಿವರಿಸುತ್ತಿದ್ದೆ. ಅದೊಂದು ದೆವ್ವಗಳ ಕಥೆ. ಕಥೆಯ ಮಧ್ಯೆ ಒಂದು ಕಡೆ, ಮೋಹಿನಿ ದೆವ್ವವೊಂದು, ಪ್ಲಾಸ್ಟಿಕ್ ಸರ್ಜನ್ ಒಬ್ಬನನ್ನು ಪ್ರೇಮಿಸಿಬಿಡುತ್ತಾಳೆ. "She fell head over heals in love with him" ಎನ್ನುತ್ತಾ ನಾನು ಕಥೆಯನ್ನು ಮುಂದುವರಿಸಿದೆ. ಚಂದ್ರಮೌಳಿ ''ಸ್ವಲ್ಪ ತಾಳಿ, "You meen head over reversed heals" ಅಂತ ಹೇಳಿ, ದೆವ್ವಗಳ ಹಿಂದು ಮುಂದಾದ ಕಾಲುಗಳ ಕಡೆ ನಮ್ಮ ಗಮನವನ್ನು ಸೆಳೆದು ನಮ್ಮನ್ನೆಲ್ಲಾ ನಗಿಸಿದ್ದ.

ಕಥಾಪ್ರಸಂಗ ಮುಗಿದಮೇಲೆ, ನಮ್ಮ ಮಾತುಕತೆ ದೇಶದ ಆಗುಹೋಗುಗಳ ಕಡೆ ತಿರುಗಿತು.

''ಚಂದ್ರಮೌಳಿ, ನೀವು ISRO ನಲ್ಲಿದ್ದೀರ. ನಿಮ್ಮ ಸಂಸ್ಥೆ ಒಂದು ಬಿಳೀ ಆನೆ ಅಂತ ಕೆಲವರು ಹೇಳ್ತಾರೆ. ನಿಜವಾಗಿ ISRO ತೆರಿಗೆದಾರನಿಗೆ ಅವನ ತೆರಿಗೆಗೆ ತಕ್ಕ ಪ್ರತಿಫಲ ಕೊಡ್ತಾ ಇದೆಯೆ? ನಿಮ್ಮ ಪ್ರಾಮಾಣಿಕ ಅಭಿಪ್ರಾಯ ತಿಳಿಸಿ'' ಅಂಥ ಕೇಳಿದೆ. ಆ

ಸಂಸ್ಥೆಯ ಅವ್ಯವಹಾರಗಳ ಬಗ್ಗೆ ಒಂದು ಉದ್ದವಾದ ಪಟ್ಟಿಯೇ ಹೊರಬರುತ್ತದೆ ಅಂತ ನಾನು ಊಹಿಸಿದ್ದೆ. ನನ್ನ ಊಹೆ ತಪ್ಪಾಗಿತ್ತು.

''ಪ್ರಾಮಾಣಿಕವಾಗಿ ಹೇಳೋದಾದ್ರೆ, ದೇಶ ನಮ್ಮ ಸಂಸ್ಥೆಯಲ್ಲಿ ತೊಡಗಿಸಿರೋ ಹಣಕ್ಕೆ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚಿನ ಪಾಲನ್ನೇ ನಾವು ಹಿಂತಿರುಗಿಸುತ್ತಿದ್ದೇವೆ ಅಂತ ಹೇಳಬಹುದು. PSLV ರಾಕೆಟ್‌ಗಳು ನಮ್ಮ ಉಪಗ್ರಹಗಳನ್ನು ಧ್ರುವ ಪ್ರದೇಶಗಳ ಮೇಲೆ ಹಾದು ಹೋಗುವ ಕಕ್ಷೆಯಲ್ಲಿ ಸ್ಥಾಪಿಸಲು ಪ್ರಾರಂಭಿಸಿದಾಗಿನಿಂದ ಭೂ ಮಂಡಲದ ಖನಿಜ ನಿಕ್ಷೇಪಗಳ ಬಗ್ಗೆ ಅತ್ಯಂತ ವಿವರವಾದ ಮಾಹಿತಿ ಒದಗಿಸುವ Photoಗಳನ್ನು ಪಡೆಯಲು ಸಾಧ್ಯವಾಗಿದೆ. ಇದನ್ನು ಅನೇಕ ಹೊರದೇಶಗಳಿಗೆ ಮಾರಿ ಅತ್ಯಧಿಕ ವಿದೇಶಿ ವಿನಿಮಯಗಳಿಸಿದ್ದೇವೆ. ಅಷ್ಟೇ ಅಲ್ಲ ನಮ್ಮ ದೇಶದ ಕಮ್ಯೂನಿಕೇಷನ್ ಮಾಧ್ಯಮ ಪ್ರಗತಿ ಹೊಂದಲು ಮುಖ್ಯ ಕಾರಣ, ನಮ್ಮ ಉಪಗ್ರಹಗಳಲ್ಲಿ ಅಳವಡಿಸಿರುವ ಟ್ರಾನ್ಸ್‌ಪಾಂಡರ್‌ಗಳು. ಇದೆಲ್ಲಾ ಕೆಲಸಗಳನ್ನೂ ನಮ್ಮ ಇಂಜನಿಯರುಗಳೇ, ಯಾವ ಹೊರಗಿನ ಸಹಾಯವೂ ಇಲ್ಲದೇ ಸಾಧಿಸಿದ್ದಾರೆ'' ಅಂತ ಚಂದ್ರಮೌಳಿ ಹೆಮ್ಮೆಯಿಂದ ಹೇಳಿದ. ನನಗೆ ಬೇರೆ ಏನು ಹೇಳಲೂ ತೋಚದೆ, ಮೊನ್ನೆ Internet ನಿಂದ down load ಮಾಡಿದ ಬಾರ್ನಕಲ್ ಬಿಲ್ ನ 3-D ಚಿತ್ರಗಳ ಬಗ್ಗೆ ಮಾತು ತಿರುಗಿಸಿದೆ.

★★★

ಸೀತಾರಾಮರಾವ್ ನಮ್ಮ ಮನೆಗೆ ಬಂದಾಗ ಸಂಜೆ ಏಳುಘಂಟೆ ದಾಟಿತ್ತು. ನಮ್ಮ ಮನೆಯಲ್ಲಿ, ಸಂಜೆಯಾಯಿತೆಂದರೆ, ಹೊರ ಬಾಗಿಲಿಗೆ ಡಬ್ಬಲ್ ಬೀಗ ಜಡಿಯುತ್ತೇವೆ. ಈ ಡಬ್ಬಲ್ ಬೀಗ ಜಡಿಯುವುದು, Increased Threat perception ನಿಂದ ಅಲ್ಲ. ನಮಗೆ ವಯಸ್ಸಾಗುತ್ತಾ ಬಂದ ಹಾಗೆ, ಜೀವನದ ಬಗ್ಗೆ ಆಳಮನಸ್ಸಿನಲ್ಲಿ ಮಾಡುವ Insecurity feeling ಗಳನ್ನು ಹತೋಟಿಯಲ್ಲಿಡಲು ನಾವು ಯೋಜಿಸಿಕೊಂಡಿರುವ ಉಪಾಯ ಇದು. ಇರಲಿ.

ಸೀತಾರಾಮರಾವ್ ಬೆಲ್ ಮಾಡಿದಾಗ, ನಾನು ''ಸ್ವಲ್ಪ ತಾಳು'' ಅಂಥ ಹೇಳಿ ದಿಡ್ಡಿ ಬಾಗಿಲನ್ನು ತೆಗೆದು, ಆತನನ್ನು ಒಳಕ್ಕೆ ಬರಮಾಡಿಕೊಂಡೆ. ನಮ್ಮಿಬ್ಬರದು ಬಹಳ ಹಳೆಯ ಪರಿಚಯ. ನಾನು ಕಿರ್ಲೋಸ್ಕರ್ ಕಂಪನಿಗೆ ಯಂತ್ರ ಸಾಮಗ್ರಿಗಳನ್ನು ಸರಬರಾಜು ಮಾಡುತ್ತಿದ್ದ ಕಾಲದಲ್ಲಿ ಈತ ಅಲ್ಲಿ Production Engineer ಆಗಿದ್ದ. ಆಮೇಲೆ ಆ ಕೆಲಸ ಬಿಟ್ಟು, ಈಗ ಸ್ವಂತ ಉದ್ಯಮ ನಡೆಸಿದ್ದಾನೆ. ಅವನನ್ನು ವರಾಂಡದಲ್ಲಿ ಕುಳ್ಳಿರಿಸಿ, ಕುಶಲ ಪ್ರಶ್ನೆ ನಡೆಸಿದೆ.

''ಹೇಗಿದೆ ಕೆಲಸ?'' ಅಂತ ಸಂಭಾಷಣೆಯನ್ನು ಮುಂದುವರಿಸಿದೆ.

''ಕೆಲಸಕ್ಕೇನು, ದಿವಿನಾಗಿದೆ ಸಾರ್. ಮಿಸ್ ವರ್ಲ್ಡ್‌ನಲ್ಲೂ ನನ್ನ ಕೈವಾಡ ಇತ್ತು'' ಅಂದ ಸೀತಾರಾಮು.

''ಕಪಾಳಕ್ಕೆ ಹೊಡೆದಳೇನು ಆ ಗ್ರೀಕ್ ಸುಂದರಿ?'' ಅಂತ ಚುಡಾಯಿಸಿದೆ.

''ಅದಕ್ಕೆ ಛಾನ್ಸೇ ಇರಲಿಲ್ಲ. ನಾನು ಆ ಕಾರ್ಯಕ್ರಮಾನ ನೋಡಿದ್ದು ಟಿ.ವಿ. ನಲ್ಲೇ. ಮೂರು ದಿನಗಳ ನಂತರ. ನನ್ನ ಕೆಲಸ ಎಲ್ಲಾ ತೆರೆಯ ಹಿಂದೆ. ABCL ನೋಡು ನನಗೆ Overall Electrial Consultant ಕೆಲಸ ಕೊಟ್ಟಿದ್ರು'' ಅಂದ.

''ದುಡ್ಡು ಕೊಟ್ರೇನೋ ಅವರು?'' ABCL ನ ಹಣಪಾವತಿ ಬಗ್ಗೆ ಬೇಕಾದಷ್ಟು ಪ್ರಚಾರ ಇತ್ತಲ್ಲ.

''ನನಗೊಬ್ಬನಿಗೆ ದುಡ್ಡು Prompt ಆಗಿ ಸಿಕ್ಕಿದ್ದು. ಅದೇ ರಾತ್ರೀನೇ ಸಿಕ್ಕಿಬಿಡ್ತು''

''ಅದು ಹೇಗೆ?''

''ಅದೊಂದು ದೊಡ್ಡ ಕಥೆ ಸಾರ್. Miss World Show ಗೆ ಕೇವಲ ಹದಿನೆಂಟು ದಿನಗಳಿದ್ದಾಗ Stadiumನ ನಮಗೆ ಬಿಟ್ಟುಕೊಟ್ರು. ಲೈಟಿಂಗ್, ಸೌಂಡ್, ಟಿ.ವಿ. ಇವೇ ಮುಂತಾಗಿ ಸಮಸ್ತ ಪರಿಕರಗಳಿಗೆ ಪವರ್ ಒದಗಿಸುವ ಹೊಣೆಗಾರಿಕೆ ನನ್ನದು. ಕೆ.ಇ.ಬಿ. ಕೈಕೊಟ್ಟರೆ ಅಂತ ಒಂದು ಜನರೇಟರ್. ಆ ಜನರೇಟರ್ Fail ಆದರೆ ಇರಲಿ ಅಂತ ಒಂದು back-up ಜನರೇಟರ್. ಸೌತ್ ಆಫ್ರಿಕಾದಿಂದ ಬಂದಿದ್ದ ಆಡಿಯೋ ವಿಷುಯಲ್ ಇಂಜಿನಿಯರುಗಳದ್ದೇ ಒಂದು ಡಿಮಾಂಡ್. ಜಪಾನೀಸ್ ಟಿ.ವಿ. ತಂಡದವರ ಕೋರಿಕೆಗಳೇ ಬೇರೆ. ಈ ಮಧ್ಯೆ ನಮ್ಮ ದೂರದರ್ಶನದವರ ಅಪ್ ಲಿಂಕಿಂಗ್ ಗಲಾಟೆ. ಎಲ್ಲರಿಗೂ ತೃಪ್ತಿ ಆಗೋಹಾಗೆ ನಾನು ಕಾರ್ಯ ನಿರ್ವಹಿಸಬೇಕಾಗಿತ್ತು. ಆ ಹದಿನೆಂಟು ದಿನಗಳೂ ನನಗೆ ಸ್ಟೇಡಿಯಂನಲ್ಲೇ ಠಿಕಾಣಿ. ರಾತ್ರಿಯೆಲ್ಲಾ ಕೆಲಸ. ಮಧ್ಯೆ ಮಧ್ಯೆ ಕೂತಲ್ಲಿ ತೂಕಡಿಸಿದ್ದೇ ನಿದ್ರೆ. ದಿನಕ್ಕೆರಡು ಬಾರಿ ABCLನ ಅಧಿಕಾರಿ Cell Phone ನಲ್ಲಿ ''ಎಲ್ಲಾ ಸರಿಯಾಗಿ ನಡೆಯುತ್ತೆ ತಾನೆ. Are you sure you won't let me down?" ಅಂತ ಆತಂಕದಿಂದ ಹಲುಬುತ್ತಿದ್ದ. ನಾನೂ ಸಹ "Don't worry, Be happy" ಅಂತ ಹೇಳ್ತಾನೇ ಇದ್ದೆ.

ನಾವೆಲ್ಲಾ ಕಾದಿದ್ದ ಆ ಸಂಜೆ ಬಂದೇ ಬಂತು. ಸ್ಟೇಡಿಯಂನಲ್ಲೆಲ್ಲಾ ಇಲೆಕ್ಟ್ರಿಕ್ ತಂತಿಗಳು ಹಾವುಗಳಂತೆ ಸರಿದಾಡುತ್ತಿದ್ದವು. ಆಗಲೇ ತುಂತುರು ಮಳೆ ಪ್ರಾರಂಭವಾಯಿತು. ಇಲೆಕ್ಟ್ರಿಕ್ ತಂತಿ ಮೇಲೆ ಮಳೆ ಬಿದ್ದರೆ ಆಗುವ ಪರಿಣಾಮ ಗೊತ್ತಲ್ಲ. ಇನ್‌ಸುಲೇಷನ್ ಎಲ್ಲಾದರೂ ಸ್ವಲ್ಪ ಖರಾಬಾಗಿದ್ದರೂ, ಷಾರ್ಟ್‌ಸರ್ಕ್ಯೂಟ್ ಗ್ಯಾರಂಟಿ. ಸ್ಟೇಜಿನ ಹಿಂದಿನ ಕಂಟ್ರೋಲ್ ರೂಮಿನಲ್ಲಿ ಉಸ್ತುವಾರಿ ನಡೆಸುತ್ತಾ ನಾನು ಕೂತಿದ್ದೆ. ABCL ಅಧಿಕಾರಿ ನನ್ನ ಪಕ್ಕದಲ್ಲೇ ಕೂತಿದ್ದ. ಹೆಪ್ಪುಗಟ್ಟಿದ್ದ ಆತಂಕವನ್ನ ಅವನ ಮುಖದ ಮೇಲೆ ಕಾಣಬಹುದಾಗಿತ್ತು. ದೇವರ ದಯೆ. ಒಂದು ತೊಂದರೆಯೂ ಇಲ್ಲದೇ ಷೋ ಮುಗಿಯಿತು. ಕಾರ್ಯಕ್ರಮ ಮುಗಿದ ತಕ್ಷಣ ಆ ಅಧಿಕಾರಿ ಕುರ್ಚಿಯಿಂದ ನೆಗೆದು ನನ್ನನ್ನು ತಬ್ಬಿಕೊಂಡ. ಆಮೇಲೆ ಜೇಬಿಗೆ ಕೈಹಾಕಿ ಒಂದು ಕವರ್ ತೆಗೆದು "with my gratitude" ಅನ್ನುತ್ತಾ ನನ್ನ ಕೈಲಿಟ್ಟ. ಕವರ್ ತೆಗೆದು ನೋಡಿದೆ. ಅದೊಂದು D.D. ನನಗೆ ಸಲ್ಲಬೇಕಾಗಿದ್ದ ಸಂಪೂರ್ಣ ಮೊತ್ತ ಅದಾಗಿತ್ತು. ನನ್ನ ಪಾಲಿಗೆ That D.D. was the most beautiful thing in that beauty contest" ಅಂದ

ಸೀತಾರಾಮರಾವ್.

"Good show!" ಅಂದೆ ನಾನು.

''ಅಂದ ಹಾಗೆ, ನಾನು ಬಂದ ಕಾರಣ ಹೇಳಲೇ ಇಲ್ಲ. ನಾಳೆ ಸಂಜೆಗೆ ಒಂದು ಡ್ಯಾನ್ಸ್ ಬ್ಯಾಲೆ ಇದೆ. ಚೌಡಯ್ಯದಲ್ಲಿ. ಖಂಡಿತ ಬರಬೇಕು ಸಾರ್'' ಅನ್ನುತ್ತಾ ಅವ ಒಂದು ಆಹ್ವಾನ ಪತ್ರಿಕೇನ ನನ್ನ ಕೈಯಲ್ಲಿಟ್ಟ.

ಶಂಕರ Eye Society ಯ ಆಶ್ರಯದಲ್ಲಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮ ಅದು.

''ನಿನಗೂ ಇದಕ್ಕೂ ಹೇಗೆ ಸಂಬಂಧ?'' ಅಂತ ಕೇಳಿದೆ.

''ಇಪ್ಪತ್ತು ವರುಷಗಳ ಹಿಂದಿನ ಮಾತು ಸಾರ್. ಎಪ್ಪತ್ತೇಳರಲ್ಲಿ, ಕಂಚಿ ಕಾಮಕೋಟಿಪೀಠದ ಆಚಾರ್ಯರು ಇಪ್ಪತ್ತು ಯುವಕರನ್ನು ತಮ್ಮಲ್ಲಿಗೆ ಕರೆಸಿಕೊಂಡಿದ್ದರು. ಅದರಲ್ಲಿ ಹತ್ತು ಮಂದಿ ಡಾಕ್ಟರುಗಳು, ಉಳಿದ ಹತ್ತು ಮಂದಿ ಬೇರೆ ಬೇರೆ ವೃತ್ತಿಗಳಿಂದ ಬಂದಿದ್ದವರು. ಆ ಹತ್ತರಲ್ಲಿ ನಾನೂ ಒಬ್ಬ, ಆಚಾರ್ಯರು ನಮ್ಮನ್ನೆಲ್ಲಾ ಹತ್ತಿರ ಕರೆದು, ''ನಮ್ಮ ದೇಶದ ಎಲ್ಲ ಸಮಸ್ಯೆಗಳನ್ನೂ ಪರಿಹರಿಸಲು ಹೋಗಬೇಡಿ. ಮೂಲಭೂತವಾದ ಮೂರು ಸಮಸ್ಯೆಗಳನ್ನು ನಿಮ್ಮ ಮುಂದೆ ಇಡುತ್ತೇನೆ. ಅಂಧತ್ವ ನಿವಾರಣೆ, ಕುಡಿಯುವ ನೀರಿನ ಸೌಲಭ್ಯ, ಹಾಗೂ ಪ್ರೈಮರಿ ವಿದ್ಯಾಭ್ಯಾಸ. ಈ ಮೂರರಲ್ಲಿ ಯಾವುದಾದರೊಂದನ್ನು ನೀವು ಆರಿಸಿಕೊಂಡು ನಿಮ್ಮ ಜೀವಿತವನ್ನೆಲ್ಲಾ ಆ ಧ್ಯೇಯಕ್ಕೆ ಮುಡಿಪಾಗಿಡಿ'' ಅಂತ ಹೇಳಿದರು. ಕೊಯಮತ್ತೂರಿನ ಅತ್ಯಾಧುನಿಕ ಉಪಕರಣಗಳಿಂದ ಸುಸಜ್ಜಿತವಾದ ಶಂಕರ Eye Hospital ಈ ಅವ್ಯಾಹತ ದುಡಿತದ ಫಲಶ್ರುತಿ. ನಾಳೆ ನಡೆಯುವ ಬ್ಯಾಲೆ ಈ ಅಂಧತ್ವ ನಿವಾರಣಾ ಕಾರ್ಯದ ಸಹಾಯಾರ್ಥ'' ಎಂದ ಸೀತಾರಾಮು.

ಡ್ಯಾನ್ಸ್ ಬ್ಯಾಲೆಯ ಪ್ರಾರಂಭದಲ್ಲಿ ಈ Eye Society ಯ ಬಗ್ಗೆ ಒಂದು ಅತ್ಯಂತ ಪರಿಣಾಮಕಾರಿಯಾದ Audio-visual ಪ್ರದರ್ಶನವಿತ್ತು. ಬ್ಯಾಲೆ ಸಹಾ ಬಹಳ ಚೆನ್ನಾಗಿತ್ತು. ಎಲ್ಲಕ್ಕೂ ಮಿಗಿಲಾಗಿ ಯುವಕ ಯುವತಿಯರು, ಈ ಆದರ್ಶದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಆತ್ಮವಿಶ್ವಾಸದಿಂದ ಓಡಾಡುತ್ತಿದ್ದ ದೃಶ್ಯ ಅತ್ಯಂತ ಮನಮೋಹಕವಾಗಿತ್ತು.

★★★

ಸಂಚಾಲಿಯ ಮನೆಯ ಹೊರ ಆವರಣದಲ್ಲಿ ನಲವತ್ತು ಸಿಲ್ವರ್ ಓಕ್ ಮರಗಳಿವೆ. ಸುಮಾರು ಹತ್ತು ಅಡಿ ಅಗಲ, ಇಪ್ಪತ್ತೈದು ಅಡಿ ಉದ್ದದ ಓಣಿಯಂತಹ ಜಾಗದಲ್ಲಿ, ಒತ್ತಾಗಿ ಬೆಳೆದಿರುವ ಈ ಮರಗಳು ಒಂದು ಮಿನಿ ತೋಪಿನಂತೆ ಕಾಣುತ್ತವೆ. ಆ ಸಂಜೆ ಅವರ ಮನೆಗೆ ಹೋದಾಗ, ನಮ್ಮ ಕಣ್ಣಿಗೆ ಬಿದ್ದ ಮೊದಲ ದೃಶ್ಯ ಇದು, ಸಂಚಾಲಿ ಮತ್ತು ಅವಳ ಪತಿ ಹರ್ಷ ಇಬ್ಬರೂ ಆರ್ಕಿಟೆಕ್ಟ್ಸ್. ಈ ನಗುಸರಸಿ ದಂಪತಿಗಳಿಗೆ ಇಬ್ಬರು

ಮಕ್ಕಳು. ಮೂರು ವರ್ಷದ ಪರೋಮಿತ ತೀರಾ ಚುರುಕು, ರಾಮಾಯಣದ ಕಥೆ ಹೇಳಮ್ಮ ಅಂದರೆ, ಒಂದಿಷ್ಟೂ ಹಿಂಜರಿಯದೇ, "ರಾಮ, ಬಿಲ್ಲು ತಗೊಂಡು ರಾವಣನ ಹತ್ತಿರ ಹೋದ. "ಸೀತೆನ ನನಗೆ ಕೊಡು" ಅಂದ. ರಾವಣ "ಕೊಡಲ್ಲ ಹೋಗ್" ಅಂದ್ಬಿಟ್ಟ" ಅಂತ ರಾಮಾಯಣದ ಎಸ್ಸೆನ್ಸ್‌ನ ತೆಗೆದು ನಮ್ಮ ಮುಂದಿಡುತ್ತಿದ್ದಳು ಪರೋಮಿತ. ತನ್ನ ತಂಗಿ ಒಂಭತ್ತು ತಿಂಗಳ ಸುಚಿತ್ರಾ ಕಂಡರೆ ತೀರಾ ಪ್ರೀತಿ ಪರೋಮಿತಾಗೆ. "ತಂಗಿ ಹುಟ್ಟಿದ ಮೇಲೆ ಪರೋಮಿತ ಸಿಬಿಲಿಂಗ್ ಜೆಲಸಿ ಏನೂ ತೋರಿಸಲಿಲ್ವಾ ಸಂಚಾಲಿ?" ಅಂತ ನಾನು ಕೇಳಿದೆ. "ಹಾಗೇನೂ ಇಲ್ಲ Uncle, ಪರೋಮಿತ has shown a lot of understanding" ಅಂದಳು ಸಂಚಾಲಿ. ಸಂಚಾಲಿ ಬೆಂಗಾಲಿ ಹುಡುಗಿ. ಕನ್ನಡಿಗ ಗಂಡನಿಗೋಸ್ಕರ, ಅದಕ್ಕೂ ಮಿಗಿಲಾಗಿ ಮಕ್ಕಳಿಗೋಸ್ಕರ ಶ್ರದ್ಧೆಯಿಂದ ಕನ್ನಡ ಕಲಿಯುತ್ತಿದ್ದಾಳೆ. ಸಂಚಾಲಿ ತನ್ನ ಮಗುವಿನ ಹತ್ತಿರ ಮಾತನಾಡುವುದನ್ನು ನೋಡುವುದೇ ಒಂದು ಮೋಜು. "ಬನ್ನಿ ಪರೋಮಿತ. ಇಲ್ಲಿ ಕೂಡಿ. ನೀವು ಊಟ ಮಾಡ್ತೀರಾ?" ಅಂತ ಯಾವಾಗಲೂ ಬಹುವಚನದಲ್ಲೇ ಆಕೆ ಮಾತು. ಬರಿಯ ಮಾತಿನಲ್ಲಿ ಮಾತ್ರವಲ್ಲ. ನಡವಳಿಕೆಯಲ್ಲೂ ಮಗುವನ್ನು ಬಹು ಮರ್ಯಾದೆಯಿಂದ ನಡೆಸಿಕೊಳ್ಳುತ್ತಾಳೆ. ಈ ಸಜ್ಜನಿಕೆಯ ಪರಿಣಾಮ ಮಗುವಿನ ಮೇಲೆ ಸಾಕಷ್ಟು ಆಗಿತ್ತು. ಬಂದ ಅತಿಥಿಗಳೊಂದಿಗೆ ಸ್ವಲ್ಪವೂ ಸಂಕೋಚವಿಲ್ಲದ ಸ್ಪಷ್ಟವಾದ ಮಾತುಗಾರಿಕೆ ಪರೋಮಿತಳದ್ದು.

ನಾವು ಮಾತನಾಡುತ್ತಿದ್ದಾಗ ಹರ್ಷ ಒಳಕ್ಕೆ ಬಂದು ಕುಳಿತ. "ಸ್ಟೇಡಿಯಂ ಕೆಲಸ ಎಲ್ಲಿಗೆ ಬಂತು ಹರ್ಷ?" ಅಂತ ಕೇಳಿದೆ. ಮೊನ್ನೆ ರಾಷ್ಟ್ರೀಯ ಕ್ರೀಡಾಮೇಳ ನಡೆದ ಕಂಠೀರವ ಸ್ಟೇಡಿಯಂನ ನಿರ್ಮಾಣಕ್ಕೆ ಹರ್ಷ, ಸಂಚಾಲಿ ಇಬ್ಬರೂ ಮುಖ್ಯ ಆರ್ಕಿಟೆಕ್ಟ್ಸ್. "ಕೆಲಸ ಎಲ್ಲಾ ಮುಗಿದಿದೆ ಅಂಕಲ್. ಎಲ್ಲೋ ಚೂರು ಪಾರು ಉಳಿದಿದೆ. ಕ್ರೀಡಾಮೇಳಕ್ಕೆ ಕೆಲವು ತಿಂಗಳ ಮುಂಚೆನಿಂದ ಅಲ್ಲೇ ಊಟ ತಿಂಡಿ ನಿದ್ರೆ ಎಲ್ಲಾ. ಅಷ್ಟು ಹೆಣಗಾಡಿದ್ದೆಲ್ಲಾ ಸಾರ್ಥಕ ಎನ್ನಿಸುತ್ತೆ ಈಗ. ಹೊರದೇಶಗಳಿಂದ ಬಂದ ಅನೇಕ ನಿಪುಣ ಆರ್ಕಿಟೆಕ್ಟ್‌ಗಳು ನಮ್ಮ ಡಿಸೈನ್‌ನ ತುಂಬಾ ಮೆಚ್ಚಿಕೊಂಡಿದ್ದಾರೆ" ಅಂದ ಹರ್ಷ.

"ಸಂಚಾಲೀ, ನಿನ್ನ ಪಾತ್ರ ಏನಿತ್ತು ಇದರಲ್ಲಿ?" ಅಂತ ನಾನು ಕೇಳಿದೆ


"ಡಿಸೈನ್ ಎಲ್ಲಾ ನಾನೇ ಮಾಡಿದ್ದು ಅಂಕಲ್. ಕಂಪ್ಯೂಟರ್ ಮುಂದೆ ಕುಳಿತು ಆಟೋಕ್ಯಾಡ್ ಬಳಸಿ, ಸ್ಟೇಡಿಯಂನ ಸಂಪೂರ್ಣ ವಿನ್ಯಾಸ ತಯಾರಿಸಿದೆ. ನೀವು ಬೇಕಾದರೆ ಸ್ಟೇಡಿಯಂಗೆ ಹೋಗಿ ನೋಡಿ. ಸ್ಟೇಡಿಯಂನಲ್ಲಿ ಎಲ್ಲಿ ಕುಳಿತರೂ, ಕ್ರೀಡಾಂಗಣದ ಸಂಪೂರ್ಣ ದೃಶ್ಯ ಕಾಣಬಹುದು. ನೋಟಕ್ಕೆ ಒಂದು ಕಂಬ ಅಡ್ಡಬರೋದಿಲ್ಲ. ಅಲ್ಲದೆ ಜನಗಳು ಸರಾಗವಾಗಿ ಬಂದು ಹೋಗೋದಕ್ಕೆ ಬೇಕಾದಷ್ಟು Ramp ಗಳನ್ನು ಸ್ಟೇಡಿಯಂ ಸುತ್ತ ಅಳವಡಿಸಿದ್ದೇವೆ. ಕ್ರೀಡಾಮೇಳದ ಪ್ರಾರಂಭದ ಸಂಜೆ ನಲವತ್ತೈದು ಸಾವಿರ ಜನ ಅಲ್ಲಿ ಸೇರಿದ್ರು ಅಂಕಲ್. ಕಾರ್ಯಕ್ರಮ ಮುಗಿದ ಮೇಲೆ ಹತ್ತೇ ನಿಮಿಷದಲ್ಲಿ ಸ್ಟೇಡಿಯಂ ಖಾಲಿ ಆಯಿತು. ನನ್ನ Ramp ಡಿಸೈನ್

ಅಷ್ಟು ಚೆನ್ನಾಗಿ ಕೆಲಸ ಮಾಡಿದ್ದು ನೋಡಿ, ನನಗೆ ನಿಜವಾಗ್ಲೂ ಹೆಮ್ಮೆ ಅನ್ನಿಸ್ತು ಅಂಕಲ್'' ಅಂದ್ಲು ಸಂಚಾಲಿ ಕನ್ನಡದಲ್ಲಿ.

''ಭಲೇ ಹುಡುಗಿ'' ಅಂತ ಮನಸ್ಸಿನಲ್ಲೇ ಅಂದುಕೊಂಡೆ.

★★★

ಮೊನ್ನೆ ನನ್ನ ತಮ್ಮ ತನ್ನ ಎಂದಿನ ಭಾನುವಾರದ ಭೇಟಿಗೆ ಮನೆಗೆ ಬಂದಿದ್ದ. ಕಳೆದ ವಾರದ ಭೇಟಿಗಳ ವರದಿ ಒಪ್ಪಿಸಿದೆ. "It goes to porve that there is life after lallo after all" ಅಂದ ಅವ.



ನಿಮ್ಮ ಕೊಬ್ಬು ಇಳಿಸಬೇಕೆ?

ವೈ. ನಾರಾಯಣ ಶರ್ಮ

ಇದೆಂತಹ ಒರಟು ಪ್ರಶ್ನೆ ಎಂದು ಹುಬ್ಬೇರಿಸಬೇಡಿ. ನೀವು ಆರೋಗ್ಯವಂತರಾಗಿರಬೇಕೂಂತ ಬಯಸ್ತಿರೋ? ಹಾಗಾದರೆ ಖಂಡಿತ ಕೂಡಲೆ ಕೊಬ್ಬು ಇಳಿಸಿಕೊಳ್ಳಿ. ಕೊಬ್ಬು ಹೆಚ್ಚಿದ್ದರೆ ಜೀವಕ್ಕೇ ಅಪಾಯ. ನೀವಾಗಿ ಕೊಬ್ಬು ಇಳಿಸಿಕೊಳ್ಳಲಿಲ್ಲವೋ ಒಂದಲ್ಲ ಒಂದು ದಿನ ಬೇರೆಯವರಾದ್ರೂ ನಿಮ್ಮ ಕೊಬ್ಬು ಇಳಿಸಿಯೇ ತೀರುತ್ತಾರೆ. ಅದಕ್ಕೇ ನನ್ನ ಕಿವಿ ಮಾತು ಕೇಳಿ, ಸುಲಭವಾಗಿ ಕೊಬ್ಬು ಇಳಿಸೋ ಉಪಾಯ ಕಂಡು ಹಿಡೀರಿ. 'ಶುಭಸ್ಯ ಶೀಘ್ರಂ' - ಇಂದೇ ಪ್ರಯತ್ನಿಸಿ.

ಕೊಬ್ಬಿನಿಂದ ಉಬ್ಬಿ ಹೋದವರ ಚರಿತ್ರೆಯನ್ನಾದರೂ ಕೇಳಿ ತಿಳಿದುಕೊಳ್ಳಿ. ಆಗಲಾದರೂ ನಿಮ್ಮ ಬುರುಡೇಲಿ ವಿವೇಕ ಹುಟ್ಟುತ್ತೇನೋ. ಕೊಬ್ಬಿನ ಇತಿಹಾಸಕ್ಕೂ ನಮ್ಮ ಪುರಾಣ ಪುಣ್ಯಕಥೆಗಳೇ ಮೂಲ. ಗಣೇಶನ ಹಬ್ಬಕ್ಕೂ ಇಮಾಮ್ ಸಾಬಿಗೂ ಏನು ಸಂಬಂಧ ಅಂತ ಹೇಳೋ ಹಾಗೆ ಕೊಬ್ಬಿಗೂ ಪುರಾಣಕ್ಕೂ ಯಾತರ ಸಂಬಂಧ ಅಂತ ನೀವು ಕೇಳಬಹುದು. ನೋಡಿ ಅಲ್ಲೇ ಇರೋದು ಗಮ್ಮತ್ತು. ಪುರಾಣ-ಪುಣ್ಯಕಥೆಗಳನ್ನು ಸ್ವಲ್ಪ ಕೆದಕಿ, ಬದಕಿ ನೋಡಿ, ಆಗ ಗೊತ್ತಾಗುತ್ತೆ, ಚಿದಂಬರ ರಹಸ್ಯ. ಇದೇನೋ ರೈಲು ಬಿಡ್ತಿದ್ದಾರೇಂತ ನಗಬೇಡಿ. ಇಗೋ ಕೇಳಿ, ಕೊಬ್ಬಿನ ಪುರಾಣಾನ.

ರಾಕ್ಷಸರು ದೇವತೆಗಳು ಯಾವಾಗಲೂ ಎಣ್ಣೆಸೀಗೆಕಾಯಿ ಇದ್ದಹಾಗೆ. ಸಮಯ ಸಿಕ್ಕಾಗ ಅವರು ಇವರನ್ನು ಚಚ್ಚೋದು. ಇವರು ಅವರಿಗೆ ತದಕೋದು. ನಾವೇ ಲೋಕದಲ್ಲಿ ಬಲಿಷ್ಠರೂಂತ ರಾಕ್ಷಸರಿಗೆ ಕೊಬ್ಬು; ನಾವೇನು ಕಡಿಮೆ? ನಮಗೆ ತ್ರಿಮೂರ್ತಿಗಳ full support ಇದೇಂತ ದೇವತೆಗಳು ಬೀಗೋದು. ಒಬ್ಬರು ಇನ್ನೊಬ್ಬರಿಗೆ ಸೆಡ್ಡು ಹೊಡೆದು ಪೂರಿಹಾಗೆ ಉಬ್ಬೋದು. ಸರಿ ಇಬ್ಬರಿಗೂ ಝುಟಾಪಟಿ, ಕಚ್ಚಾಟ, ಹೊಡೆದಾಟ. ಕೊಬ್ಬು ಸುಮ್ಮನಿರೋಕ್ಕೆ ಬಿಡುತ್ಯೆ? ಸರಿ, ಹಣಾಹಣಿ, ಕೇಶಾಕೇಶಿ, ಮುಷ್ಟಾಮುಷ್ಟಿ ಕದನ. ಒಮ್ಮೆ ರಾಕ್ಷಸರ ಕೈ ಮೇಲಾದರೆ, ಮತ್ತೊಮ್ಮೆ ದೇವತೆಗಳದ್ದು. ದೇವೇಂದ್ರ, ವೃತ್ರಾಸುರನ ಕಾಳಗ ಕೇಳಿರಬೇಕಲ್ಲ. ಗಂಡ-ಹೆಂಡಿರ ಜಗಳ ಕೂಸು ಬಡವಾಯ್ತು ಅನ್ನೋ ಗಾದೆ ಹಾಗೆ ಮೂರು ಲೋಕಗಳಲ್ಲೂ ಅಶಾಂತಿ. ಬಡ ಪ್ರಾಣಿ ಮಾನವ ಮಿಕಮಿಕ ನೋಡೋದು, ಒಳ ಒಳಗೇ ಉಗುಳು ನುಂಗೋದು. ಯಾರ ಪಕ್ಷವಹಿಸಿದರೂ ಕಷ್ಟ. ಹೇಳೋಹಾಗಿಲ್ಲ, ಅನುಭವಿಸೋ ಹಾಗಿಲ್ಲ. ಎಷ್ಟೇ ಆದರೂ ಕಿಲಾಡಿ ಮನುಷ್ಯ ದೇವತೆಗಳ ಕಡೇಗೇ ವಾಲೋದು. ಬಾಲ್ಕನಿ ಸೀಟಿನ ಈ ದೇವತೆಗಳು ವರವೆಂಬ ಮಾಮೂಲಿ ಕೊಟ್ಟು ಮನುಷ್ಯರನ್ನೆಲ್ಲ ಬುಟ್ಟಿಗೆ ಹಾಕಿಕೊಂಡು ಬಿಟ್ಟರು. ನೋಡಿ ಇಲ್ಲಿಂದ ಶುರುವಾಯ್ತು crossing the floor. ಎಷ್ಟಾದಾರೂ ಮನುಷ್ಯರಿಗೆ ಹಡಿಯಾಸೆ ದುರಾಶೆ ಇದ್ದದ್ದೇ. ಮನುಷ್ಯರ ಈ weakness ದೇವತೆಗಳಿಗೂ ಚೆನ್ನಾಗಿ ಗೊತ್ತಿತ್ತು. ಅಂದಹಾಗೆ ಈಗ ದಿನ ಬೆಳಗಾದರೆ ಕೇಳುತ್ತಿರುವ Kick backs, Commission, Hawala, Scams ವಗೈರೆ-ವಗೆ ರೆ ಮನುಷ್ಯ ಜಾತಿಗೆ ತಲೆ

ತಲಾಂತರಗಳಿಂದ ಅಂಟಿಕೊಂಡು ಬಂದಿರೋ ಸಾಂಕ್ರಾಮಿಕ ರೋಗ. ಇದು ಸಿಬಿಐ ಗೆ ಹೇಗೆ ತಾನೆ ಅರ್ಥವಾದೀತು! ವಿಷಯ ಎಲ್ಲಿಂದ ಎಲ್ಲಿಗೋ ಜಾರಿತು ಅಂತ ಬೇಸರಿಸಿಕೊಳ್ಳಬೇಡಿ.


ರಾಕ್ಷಸರ ಕೊಬ್ಬು ಇಳಿಸಲು ದೇವಗಣ ಹೂಡಿದ ತಂತ್ರ ಗೊತ್ತಿರಬೇಕಲ್ಲ. ಮಹಾವಿಷ್ಣುವಿನ ಹತ್ತಿರ "Delegation' ಹೋಗೋದು, ಮೂರು ಲೋಕಗಳಲ್ಲೂ ರಾಕ್ಷಸರ ಹಾವಳಿ ಹೆಚ್ಚಾಗಿದೆ. ಇದನ್ನು ಮಟ್ಟಹಾಕಲು ನೀವು ಅವತಾರ ತಾಳಬೇಕು; ಲೋಕೋದ್ಧಾರ ಮಾಡಬೇಕೂಂತ ಅಂಗಲಾಚೋದು, ತಾಜಾಮಾಡೋದು, ಪೂಸಿ ಹೊಡೆಯೋದು. ಮತ್ತೊಂದು ಸಲ ಭೋಲೆ ಶಂಕರನಿಗೆ ಅಡ್ಡಬೀಳೋದು, ರಾಕ್ಷಸರ ಕೊಬ್ಬಿನ ಬಗ್ಗೆ ಉಪ್ಪುಖಾರ ಹಚ್ಚಿ ಸಖತ್ ಚಾಡಿ ಹೇಳೋದು. ಸರಿ, ಇಬ್ಬರೂ ಸರದಿ ಮೇರೆಗೆ ಅವತಾರ ತಾಳಿ ರಾಕ್ಷಸರನ್ನು ಎಣ್ಣೆಗಾಯಿ - ನೀರುಗಾಯಿ ಮಾಡೋದು. ರಾಮಾಯಣ, ಭಾರತ, ಭಾಗವತದ ತುಂಬ ಇಂಥದೇ ಕಥೆಗಳು.

ಕೊಬ್ಬು ಹೇಗೆ, ಏಕೆ ಹುಟ್ಟುತ್ತೇಂತ ಗೊತ್ತೆ? ಒಂದು ಸಂಶೋಧನೆಯ ಪ್ರಕಾರ ರೂಪ, ಯೌವನ, ಧನ, ವಿದ್ಯೆ, ಇವೇ ಕೊಬ್ಬಿನ ಮೂಲ. ವೈದ್ಯವಿಜ್ಞಾನ ಹೇಳುತ್ತೆ - ಜಿಡ್ಡಿನ ಅಂಶ ಹೆಚ್ಚೋದು, ಮಿತಿಮೀರಿ ತಿನ್ನೋದು ಇವೆರಡರಿಂದ ಕೊಬ್ಬು ಹೆಚ್ಚುತ್ತೆ. ಇದೇನೇ ಇರಲಿ, ಕೊಬ್ಬನ್ನೇ ಬಂಡವಾಳ ಮಾಡಿಕೊಂಡು ಮೆರದೋರು ಒಬ್ಬರೆ, ಇಬ್ಬರೆ! ಅಸಂಖ್ಯ ದೇವತೆಗಳು, ರಾಕ್ಷಸರು ಮತ್ತೂ ಜಂಬದ ಕೋಳಿ ಮನುಷ್ಯರು. ಕೊನೆಗೆ ಒಂದುದಿನ ಎಲ್ಲರೂ ಸುಟ್ಟು ಬದನೇಕಾಯಿಯಂತೆ ಸೊರಗಿ ಹೋದರು. ಇಷ್ಟನ್ನೆಲ್ಲ ನೋಡಿಯೂ, ಕೇಳಿಯೂ ನಾವೇನು ಪಾಠ ಕಲಿತವೇ? ಈ ಮನಷ್ಯರ ಇತಿಹಾಸವನ್ನೇ ನೋಡಿ, ರಾವಣ, ದುರ್ಯೋಧನ, ಕಂಸ, ಜರಾಸಂಧ, ಅಲೆಗ್ಸಾಂಡರ್, ಹಿಟ್ಲರ್, ಮುಸಲೋನಿ, ಸ್ಟಾಲಿನ್. ಇತ್ಯಾದಿ ಎಲ್ಲರೂ ಕೊಬ್ಬಿಹಾರಾಡಿದ್ದೇನು? ಕೊನೆಗೆ ಒಂದು ದಿನ ಕೊಬ್ಬು ಇಳಿದ ಮೇಲೆ ಇವರೆಲ್ಲ ದೇವರು ದಯಪಾಲಿಸಿದ 6x3 ಅಡಿ ಸೈಟಿನಲ್ಲಿ ತೆಪ್ಪಗೆ ಮಲಗಿದವರೇ. ಇಷ್ಟಾದರೂ ಈ ಜುಜುಬಿ ಮನುಷ್ಯ ಕೊಬ್ಬು ಇಳಿಸಿ ಕೊಂಡಿದ್ದಾನೆಯೆ? ಊಹೂಂ! ನಾವು ಕೊಬ್ಬಿದರೆ ನಿಮ್ಮಪ್ಪನ ಮನೆ ಗಂಟೇನು ಹೋಯ್ತು? ಎಂತ ಕೇಳ್ತಾರಲ್ಲಾ! ಅಬ್ಬಾ!!

ಈಗಿನ ಕಾಲದಲ್ಲಿ ತಿನ್ನಬಾರದ್ದನ್ನೆಲ್ಲಾ ಕಂಡಾಬಟ್ಟೆ ತಿಂದೂ-ತಿಂದೂ ಕೊಬ್ಬಿರೋರೇ ಜಾಸ್ತಿ. Food Inspector ಇವರ ಮುಂದೆ ಯಾಕೆ? ಕೆಲವರನ್ನಂತೂ ನೋಡಿದ್ರೆ, ಅವರ ಗಾತ್ರ, ಆಕಾರ, ತೂಕವೇ ಗಾಬರಿ ಹುಟ್ಟಿಸುತ್ತೆ. ಪ್ರೊಟೀನ್, ನ್ಯೂಟ್ರೀಷನ್, ಟಾನಿಕ್, ತಾಕತ್-ಕೀ-ದೂ ಅನ್ನೋ ಹೆಸರಿನಲ್ಲಿ ಸದಾ ತಿನ್ನುತ್ತಿರುವುದೇ ಇವರ ಕಸಬು. ಈ ಮಂದಿ ಹಲ್ಲಿಗೂ, ಬಾಯಿಗೂ ಬಿಡುವೇ ಕೊಡೋದಿಲ್ಲ. ಅಲ್ಲ, ಈ ಪಾಟಿ ಮಿತಿಮೀರಿ ತಿನ್ನೋದೇಕೆ? ಆಮೇಲೆ ತೂಕ ಹೆಚ್ಚಾಯ್ತು ಅಂತ 'ಡಯಟ್' ಮಾಡ್ತಿದ್ದೀನಿ ಎಂದು ಕಂಡವರ ಮುಂದೆಲ್ಲ ತುತ್ತೂರಿ ಊದೋದು ಯಾಕೆ? ನಾಲಿಗೆಯನ್ನು ಹತೋಟೀಲಿ ಇಟ್ಟುಕೊಳ್ಳದ ಮೇಲೆ ಇವರ ಓದಿಗೆ ಏನು ಬೆಲೆ ಅಂತೀನಿ.

ಇನ್ನೂ ಕೊಬ್ಬಿದವರಿಗೆ ಈ ಡಾಕ್ಟರ್ ಮಂದಿ ಮಾಡುವ ಚಿಕಿತ್ಸೆಯೋ ಚಿತ್ರ-ವಿಚಿತ್ರ. ''ಕಡಿಮೆ ತಿನ್ನಿ, ಹೆಚ್ಚು ಅಡ್ಡಾಡಿ, ಎಣ್ಣೆ-ತುಪ್ಪ ಬೇಡ, ಸೊಪ್ಪು-ಸದೆ ಹಸಿ ತರಕಾರಿ ತಿನ್ನು,

ಮಾಂಸ-ಮೊಟ್ಟೆ-ಸಿಹಿ ಬಿಡಿ, ಹಾಲು-ಮೊಸರು ಸೇವಿಸಬೇಡಿ. ವಾರಕ್ಕೆ ಒಂದು ದಿನ ಉಪವಾಸಮಾಡಿ.'' Abdomen Belt, Abdomen Roller, Walker-machine ಗಳಿಂದ ಫಿಜಿಯೋ ಥೆರಫಿಮಾಡಿ ಎಂದು ಅಲೋಪತಿಯರು ಕೊರೀತಾರೆ. ಪ್ರಕೃತಿಯ ಚಿಕಿತ್ಸಕರು, ಸೋನಾಬಾತ್, ಸ್ಟೀಮ್‌ಬಾತ್, ಆಯಿಲ್ ಮಸಾಜ್, ಮಣ್ಣಿನ ಲೇಪನ ಮಾಡಿಸಿಕೊಳ್ಳಿ, ಕೊಬ್ಬು ಸರ್ರನೆ ಇಳಿಯುತೇಂತ ಸಲಹೆ ಕೊಡ್ತಾರೆ. ಯೋಗ ಚಿಕಿತ್ಸಕರು ನೌಕಾಸನ, ಶಲಭಾಸನ, ಕುಕ್ಕುಟಾಸನ, ವಕ್ರಾಸನಗಳನ್ನು ಒಂದೊಂದು ಘಂಟೆ ಮಾಡಿ ಎಂದು ಸರಳ ಶಿಕ್ಷೆಗೆ ಗುರಿಪಡಿಸುತ್ತಾರೆ. ನನಗಂತೂ ಅನಿಸುತ್ತೆ, ಕೊಬ್ಬೋದು ಏಕೆ? ಈ ಎಲ್ಲಾ ಫಜೀತಿ ಪಡೋದೇಕೆ? ನೋಡಿ, ದೇಹದ ಕೊಬ್ಬನ್ನು ಹೇಗಾದ್ರೂ ಇಳಿಸಬಹುದು. ಆದರೆ ಮನಸ್ಸು ಬುದ್ಧಿಗಳ ಕೊಬ್ಬು ಇಳಿಸೋ ಭೂಪತಿಗಂಡು/ಹೆಣ್ಣು ಇನ್ನೂ ಹುಟ್ಟಿಲ್ಲಾಂತ ಕಾಣುತ್ತೆ. ಇತ್ತೀಚೆಗೆ ನ್ಯಾಯಾಲಯಗಳು, ಸಿಬಿಐ ಮತ್ತು ಇನ್‌ಕಮ್ ಟ್ಯಾಕ್ಸ್‌ನವರು ಕಪ್ಪು ಹಣದ ಖದೀಮರ, ಪುಢಾರಿಗಳ ಕೊಬ್ಬನ್ನು ಸ್ವಲ್ಪ-ಸ್ವಲ್ಪ ಕರಗಸ್ತಾ ಇದ್ದಾರೆ. ಆದರೆ ರಾಗ-ದ್ವೇಷ, ಲೋಭ-ಮೋಹ, ಮದ-ಮಾತ್ಸರ್ಯಗಳಿಂದ ಕೊಬ್ಬಿರೋರ ಕೊಬ್ಬು ಇಳಿಸಲು ಭಗವಂತನೇ ಮತ್ತೊಮ್ಮೆ ಭೂಮಿಗೆ ಇಳಿದು ಬರಬೇಕೇನೋ! ಅದು ಕ್ರಿ.ಶ. 2001ರ ವೇಳೆಗಾದರೂ ಸಾಧ್ಯವಾಗಬಹುದೇ? ಪಾರ್ಕಲಾಂ!



''ಹೇ ಬಾಪು! ಇವ್ರಿಂದ ನಮಗೆ ಸ್ವಾತಂತ್ರ್ಯ ಎಂದಿಗಪ್ಪಾ?''

''ಮಲೇರಿಯಾ - ಮಲೇರಿಯಾ!''

ಕಮಲಾ ರಾಮಸ್ವಾಮಿ

ಸಂಜೆ ಆರೂವರೆ ಘಂಟೆ. ಅಡಿಗೆ ಮನೆಯಿಂದ ಹಾಗೆ T.V. ಕಡೆ ಕಣ್ಣು ಹಾಯಿಸಿದೆ. D.D 1 ನಲ್ಲಿ ''ಸಿ.ಆರ್. ಸಿಂಹ''! ಒಲೆ ಆರಿಸಿ, ಕೈ ಒರೆಸಿಕೊಂಡು ಓಡಿ ಬಂದು ಅದರ ಮುಂದೆ ಕೂತೆ. ''ಕೈಲಾಸಂ, ಕುವೆಂಪು'' ಇತ್ಯಾದಿಗಳನ್ನು ಕಂಡಿದ್ದ ನಾನು ಅವರ fan. ''ಅನಾಫಿಲೀಸ್ ಎಂಬ ಹೆಣ್ಣುಸೊಳ್ಳೆ'' ಎಂದು ಶುರು ಮಾಡಿದಾಗ ನಿರಾಶೆಯಾಯಿತು. ಎದ್ದು ಬಂದೆ. ಈ ಮಲೇರಿಯಾ ಬಗ್ಗೆ ಇಷ್ಟೊಂದು ಆತಂಕ, ಅವಾಂತರ ನಡೀತಾ ಇದ್ರೆಲ್ಲಾ, ನಿಜವಾಗ್ಲೂ ಇದನ್ನ ಯಾರಾದ್ರೂ ಸೀರಿಯಸ್ಸಾಗಿ ತೊಗೊತಾರ್‍ಯೇ? 1982-93ರಲ್ಲಿ ತಿಂಗಳಿಗೊಮ್ಮೆ ಹರೆಯದ ಹೆಣ್ಣುಮಕ್ಕಳೂ, ಯುವಕರೂ ಒಂದು ಕರೆಘಂಟೆಯನ್ನು ಒತ್ತಿ (ಆಗ Power-cut ಇರ್‍ಲಿಲ್ಲ) ''ನಿಮ್ಮನೇಲಿ ಯಾರಿಗಾದ್ರೂ ಮಲೇರಿಯಾ ಬಂದಿದ್ಯಾ'' ಅಂತ ವಿಚಾರಿಸಿಕೊಂಡು ಮಾಹಿತಿ ಕಲೆಕ್ಟ್ ಮಾಡಿಕೊಂಡು ಹೋಗುತ್ತಿದ್ದರು. ಒಂದು ದಿನ ಊರಿಂದ ಬಂದಿದ್ದ ನಮ್ಮತ್ತೆ ಆ ಹೆಣ್ಣು ಮಗಳ ಮೇಲೆ ರೇಗಿದ್ದೂ ನೆನಪಿದೆ. ''ಮಕ್ಳು ಮರಿ ಇರೋ ಮನ್ಲಿ ಆ ಕಾಯಿಲೆ ಮಾತು ಎತ್ತಬೇಡ. ಸಾಗರದಲ್ಲಿದ್ದಾಗ ಆ ಹಾಳು ರೋಗದಿಂದ ನರಳಿ ಹೊಟ್ಟೇಲಿ ಗೆಡ್ಡೆ ಬಂದಿತ್ತು. ಹೋಗಮ್ಮ ಹೋಗು! ಈ ಬೀದಿಗೆ ಇನ್ನೊಮ್ಮೆ ಕಾಲಿಟ್ಟೇಯಾ?'' ಎಂದು ಗದರಿಸಿ ಕಳುಹಿಸಿದ್ದರು. ಅವಳಿಗೂ ಸಿಕ್ಕಾಪಟ್ಟೆ ಕೋಪ ಬಂದು, ಆಗ ತಾನೇ ಕಲರ್ ವಾಶ್ ಮಾಡಿಸಿದ್ದ ಮನೆ ಗೋಡೆಯ ಮೇಲೆಲ್ಲಾ ನೂರಾರು ಸರ್ವೆನಂಬರ್ ಗೀಜಿ ಹೋಗಿದ್ದಳು. ಅದನ್ನ ನೋಡಿ ಇವ್ರು ಕೂಗಿದ್ದು - ಎಲ್ಲಾ ನೆನಪಿನಲ್ಲಿ ಹಸಿರಾಗೇ ಉಳಿದಿತ್ತು.

ಎಲ್ಲಾ ನೆನಪಿನ ಪದರದಲ್ಲಿ ಕುಣಿದಾಡಿತು. ಸ್ಸ....ರಿ! ಕರೆಂಟು ಇದ್ದಾಗ ಚಟ್ನಿ ಅರೆದಿಡಬೇಕು. ಇಲ್ದೇ ಇದ್ರೆ ಬೆಳಿಗ್ಗೆ ದೇವ್ರೇ ಗತಿ- ಈ ಕರೆಂಟು ಕಣ್ಣಾಮುಚ್ಚಾಲೆ ಆಟದಲ್ಲಿ.

ಒಳಗೆ ಹೋಗಿ ಮಿಕ್ಸಿ ರೆಡಿ ಮಾಡುತ್ತಿದ್ದೆ. ಬಾಗಿಲ ಬೆಲ್ ಕರೆಯಿತು. ಜೊತೆಗೇ ''ಅಮ್ಮಾ ಅಮ್ಮಾ ಯಾರು ಬಂದಿದ್ದಾರೆ ನೋಡು!'' ಅಂತ ಸುಮಾ ಕೂಗಿದಳು. ಬಂದು ನೋಡಿದೆ ''ಅರೆ! ಸರಸು! ಇದೇನೆ ಹೀಗೆ ದಿಢೀರ್ ವಿಸಿಟ್ಟು! ಹೇಳಿದ್ದರೆ ಬಸ್‌ಸ್ಟಾಂಡಿಗೆ ಯರನ್ನಾದ್ರೂ ಕಳಸ್ತಾ ಇದ್ದೆ'' ಸರಸು ನನ್ನ ಸೊಸೆಯ ತಂಗಿ ಕಣಕಟ್ಟೆಯಿಂದ ಬಂದಿದ್ಳು.

''ಯಾಕೆ ಹೀಗೆ ಇಳಿದು ಹೋಗಿದ್ದೀಯಾ! ಬಾಳ ನಲುಗಿದ್ದೀ'' ನನ್ನವರು ವಿಚಾರಿಸಿಕೊಂಡರು. ಜೊತೆಗೆ ಬಂದಿದ್ದ ತಮ್ಮ ಜಗ್ಗು.

''ಈಗೊಂದು ವಾರದಿಂದ ಜ್ವರ ಹೊಡೀತಾ ಇದೆ. ಅಲ್ಲಿ ಡಾಕ್ಟ್ರು ಮೈಸೂರಿನ ಡಾಕ್ಟ್ರು ಎಲ್ರೂ ಔಷಧಿ ಕೊಟ್ರು. ಮೊದಲು ಫ್ಲೂ ಅಂದ್ರು. ಆಮೇಲೆ ಟೈಫಾಯಿಡ್ ಇರಬೇಕು ಅಂದ್ರು. ಆಮೇಲೆ ಮತ್ತೇನೋ ಹೇಳಿದ್ದು. ಅದ್ಕೆ ಅವಳ ಗಂಡ, ಅತ್ತೆ, ಮಾವ ಎಲ್ರೂ ''ಬೆಂಗ್ಳೂರಿಗೆ ಹೋಗಿ ತೋರ್‍ಸ್ಕೊಂಡು ಬಾ'' ಅಂದ್ರು. ಜಗ್ಗು ವರದಿ ಮಾಡಿದ.

ಸರಸು ಮೇಲ್ವಿಚಾರಣೆನ ನನ್ನ ತಮ್ಮನ ಮಗ ವಿಶ್ವನಿಗೆ ವಹಿಸಿದೆ. ಬಲು ಎಂಟರ್‌ಪ್ರೈಸಿಂಗ್ ಅವನು. ಕಂಪ್ಯೂಟರ್ ಎಕ್ಸಾಮ್‌ಗಾಗಿ ಬಂದಿದ್ದ. 2 ವೀಲ್ಹರ್ 3,4

ವೀಲ್ಚರ್ ಎಲ್ಲಾ ಓಡಸ್ತಾ ಇದ್ದುದರಿಂದ ಸರಸುವಿನ ಡಾಕ್ಟರುಗಳು, ಔಷಧಿ ಪಥ್ಯ ಇತ್ಯಾದಿ ಜವಾಬ್ದಾರಿ ಅವನಿಗೆ ಹೊರಿಸಿದೆ. ಮಾರನೇ ದಿನ ಬೆಳಿಗ್ಗೆ ಅವಳಿಗೆ ಜ್ವರ 106 ಡಿಗ್ರಿಗೆ ಹೋದಾಗ ಭಯವಾಯಿತು, ಡಾಕ್ಟ್ರು ಬಂದು ಇಂಜಕ್ಷನ್ ಕೊಟ್ಟು ಮಾಡಬೇಕಾದ ಪರೀಕ್ಷೆಗಳ ಪಟ್ಟಿ ಕೊಟ್ಟು Report ತನ್ನಿ, ಆನಂತರ ಔಷಧಿ ಕೊಡ್ತೀನಿ ಅಂದ್ರು.

2 ದಿನಗಳ ಬಳಿಕ report ಬಂತು. ಸಧ್ಯ! ಇನ್ಯಾವ ಖಾಯಿಲೆಯೂ ಆಗಿರದೆ ''ಮಲೇರಿಯಾ'' ಅಂದ್ರು. ಮಲೇರಿಯಾಗೆ ಸಿದ್ಧೌಷಧ ಕ್ವಿನೀನು. ಅಷ್ಟೇ ತಾನೆ ಅಂದುಕೊಂಡೆ. ''ಹೋಗೋ ವಿಶ್ವ ಮೆಡಿಕಲ್ ಸ್ಟೋರ್‌ನಲ್ಲಿ ಕ್ವಿನೀನು ಮಾತ್ರೆ ತಾ'' ಎಂದೆ ವಾಪ್ಸು ಬಂದು ಹೇಳಿದ ''ಡಾಕ್ಟರ್ ಪ್ರಿಸ್‌ಕ್ರಿಪ್‌ಷನ್ ಇಲ್ದೆ ಡ್ರಗ್ಸ್ ಕೊಡುಲ್ಲ ಅಂದ್ರು'' ಅಂತ

ಹತ್ತು ಘಂಟೆಗೆ ಡಾಕ್ಟರರ ಶಾಪ್‌ಗೆ ಹೋದ, ಮೂರು ಘಂಟೆಯಾದ್ರೂ ಬರ್ಲಿಲ್ಲ. ಗಾಭರಿ ಆಯ್ತು. ಪಕ್ಕದ ಮನೆಯ ಸೂರಿ ಸ್ಕೂಟರ್ ತಗೊಂಡು ಹೋಗಿದ್ದ. ಗ್ರಹಚಾರ!

ಸಧ್ಯ ಬಂದ ಸೋತು ಸುಣ್ಣವಾಗಿ! ''ಎಲ್ಲಿಗೆ ಹೋಗಿದ್ದೆಯೋ! ಯಾಕಪ್ಪ ಲೇಟು'' ಎಂದೆ.

''ನಿಂಗೇನು ಗೊತ್ತು ಅತ್ತೆ! ಬೆಳಿಗ್ಗೆ report ತಗೊಂಡು ಹೋದ್ರೆ, ಡಾಕ್ಟರು ಮಲೇರಿಯಾಗೆ ಮದ್ದು ಸಿಗುವುದು ಸರ್ಕಾರಿ ಕೇಂದ್ರದಲ್ಲಿ, ನೀನು Victoria ಆಸ್ಪತ್ರೆಗೆ ಹೋಗಿ ಒಂದು Form ತಗೊಂಡು ಬಾ. ಭರ್ತಿ ಮಾಡಿ ಕೊಡು, ನಾನು Sign ಮಾಡುತ್ತೇನೆ. ಆಮೇಲೆ ಮುಂದೇನು ಮಾಡಬೇಕು ಅಂತ ಹೇಳ್ತೀನಿ ಅಂದ್ರು. ಸರಿ! ಗಿಂಡಾಯ ನಮಃ ಅಂದ್ಕೊಂಡು ವಿಕ್ಟೋರಿಯಾ ಆಸ್ಪತ್ರೆಗೆ ಹೋದೆ. ಅಲ್ಲಿ ಆ Form ಸಿಗುಕ್ಕೆ ಆ ಬ್ಲಾಕು, ಈ ಬ್ಲಾಕು ಅಂತ ಓಡಾಡಿಸಿದರು. ಕಟ್ಟಕಡೆಗೆ ''ಹುಚ್ಚುನಾಯಿ ಕಚ್ಚಿದ್ದಕ್ಕೆ ಚುಚ್ಚುಮದ್ದು'' ಎಂಬ ಬೋರ್ಡಿನ ಹಿಂದಿನ ಬ್ಲಾಕಿನಲ್ಲಿ ಈ Form ಕೊಡ್ತಾ ಇದ್ರು. ಅಲ್ಲಿಗೆ ಹೋಗಿ ತಗೊಂಡು ಬಂದೆ. ಅಲೆದಲೆದು ಅತ್ತಿಕಾಯಿ ಆದೆ. 21/2 ಘಂಟೆಗೇ ಸೂರಿಗೆ ಸ್ಕೂಟರ್ ಕೊಟ್ಟುಬಿಡ್ತೀನಿ ಅಂದಿದ್ದೆ. ಅದಕ್ಕೆ ಓಡಿ ಬಂದೆ. ಸಂಜೆ ಡಾಕ್ಟರ್ ಕೈಲಿ ಸಹಿ ಹಾಕ್ಸಿ ಔಷಧಿ ತರ್ತೀನಿ'' ಅಂದ- ಪಾಪ ವಿಶ್ವ! ಪಟ್ಟ ಪಡಿಪಾಟು ಅನುಭವಿಸಿದವರಿಗೇ ಗೊತ್ತು.

ಮಾರನೇಯ ದಿನ ವಿಶ್ವನ ಪರ್ಯಟನೆಯ ಪ್ರಾರಂಭ. ಬೆಳಿಗ್ಗೆ 8-30 ಘಂಟೆಗೇ. ಏಕೆಂದರೆ ರಾಜಾಜಿನಗರಕ್ಕೆ ಹೋಗಬೇಕಿತ್ತು. ಮಲೇರಿಯಾ ಆಫೀಸು ಇರುವುದು ಅಲ್ಲೇ. ಬೆಳಿಗ್ಗೆ ನನ್ನ ಮಗನ ಮೊಪೆಡ್ ತೆಗೆದುಕೊಂಡು ಹೊರಟ! 'ಎಷ್ಟೊತ್ತಾಗುತ್ತೋ ಏನೋ! ನನಗೆ ಕಾಯಬೇಡಿ'' ಎಂದು ಹೇಳಿ ಹೊರಟ. ಬೆಂಗ್ಳೂರಿನಲ್ಲಿ ಅಡ್ರೆಸ್ ಹುಡುಕೋದು ಅಂದ್ರೆ - ಹುಡುಕಿದವರಿಗೇ ಗೊತ್ತು. ''ಇದು 6ನೇ ಬ್ಲಾಕು - ನಿಮ್ಮ ವಿಳಾಸ ಮೂರನೇ ಬ್ಲಾಕಿನಲ್ಲಿದೆ'' ''ಇದು ಆರನೇ ಕ್ರಾಸು, 8ನೇ ಕ್ರಾಸಿನಲ್ಲಿ ಇರ್ಬೇಕು... ಇತ್ಯಾದಿ! ಕಡೆಗೆ ಅಲ್ಲೊಂದು ಪೋಸ್ಟ್ ಆಫೀಸಿಗೆ ಹೋಗಿ ಕೇಳಿದಾಗ ''ಹೊಸಹಳ್ಳೀಗೆ ಬದಲಾಯಿಸಿದರಲ್ವಾ'' ಅಂತ ವಿಶ್ವನ್ನೇ ಕೇಳಿದ್ರು. ನೂರಾರು ಪ್ರಶ್ನೆ, ನೂರಾರು ಸಂದೇಹಗಳನ್ನು ತಂದೊಡ್ಡಿದ್ದರು ನಮ್ಮ ನಗರವಾಸಿ ಪೌರರು! ವಿಶ್ವನಿಗೆ ಸಾಕಾಯಿತು. ಸೋಲೆ ಒಪ್ಪದ ಈ ಭೂಪ ಮಲೇರಿಯಾಗೆ ಸೋತ. ಇಂಗು ತಿಂದ ಮಂಗನ ಮುಖ ಮಾಡಿಕೊಂಡು ಮನೆ ಕಡೆ ವಾಪ್ಸು ಹೊರಟ. ರಸ್ತೆ ಕೊನೆಯಲ್ಲಿ ಬಲಕ್ಕೆ ತಿರುಗಿದಾಗ ಬೆನ್ನಿಗೆ ಪಂಪು ತಗುಲಿ ಹಾಕಿಕೊಂಡು ಬರುತ್ತಿದ್ದ ಖಾಖಿಧಾರಿಯನ್ನು ಕಂಡಾಗ ಕಡೇ

ಟಾನ್ನು ಅಂತ ''ಏನಪ್ಪಾ ಈ ಮಲೇರಿಯಾಗೆ ಔಷಧಿ ಕೊಡುವ ಆಫೀಸು ಎಲ್ಲಿದೆ ಗೊತ್ತಾ?'' ಅಂದ.

ಆತ ಇವನ್ನ ಆಪಾದ ಮಸ್ತಕ ನೋಡಿದ ''ಗೊತ್ತು! ನಡೀರಿ ತೋರ್ಸ್ತೀನಿ'' ಅಂತ ಮೊಪೆಡ್ ಹಿಂದೆ ಹತ್ತಿದ. ಒಂದು ನಾಲ್ಕು ಕ್ರಾಸು ರೋಡುಗಳು, 5 ಮೇಯಿನ್ ರೋಡ್ ದಾಟಿದ ನಂತರ ಒಂದು ಹಳೇ ಕಾಂಪೌಂಡಿನಲ್ಲಿ ಹಿಂದಕ್ಕೆ ಇದ್ದ ಹಳೇ ಮನೆಯ ಮಹಡಿ ತೋರಿಸಿ ''ಅದೇಯೇ!'' ಅಂದ.

ವಿಶ್ವ ಹತ್ತಿರ ಹೋಗಿ ಅಲ್ಲೇ ಇದ್ದ ಮಾಸಲು ಬೋರ್ಡು ನೋಡಿದ. ''ಮಲೇರಿಯಾ ಇರಾಡಿಕೇಷನ್ ಸೆಂಟರ್!'' ಅಬ್ಬಾ! ಕಡೆಗೂ ಗೆದ್ದೆ. ಆತ್ಮವಿಶ್ವಾಸ ನೂರು ಪಟ್ಟು ಹೆಚ್ಚಿತು. ಆ ಹಳೇ ಮಹಡಿ ಮೆಟ್ಟಲನ್ನು ಹುಷಾರಾಗಿ ಹತ್ತಿದ. ಆ ಕಿಗ್ಗಲು ನಾಮ ಸಂವತ್ಸರದ ಆಫೀಸಿಗೆ ಕಾಲಿಟ್ಟ.

ಆ ಆಫೀಸಿನಲ್ಲಿ ನಾಲ್ಕು ಹಳೇ ಬೆಂಚು, ಕಾಲು, ಕೈ ಮುರಿದ ಕುರ್ಚಿಗಳು, ಓಬಿರಾಯನ ಕಾಲದ ಮೇಜುಗಳೂ ಇದ್ದವು. ಎಲ್ಲಾ ತಮ್ಮ ಹಣೇ ಬರಹವನ್ನು ಸಾರುತ್ತಿದ್ದವು. ಹಳೇ ಬೀರುವಿಗೆ ತಲೆ ಒರಗಿಕೊಂಡು ಮುರುಕಲು ಕುರ್ಚಿಯಲ್ಲಿ ಕೂತು ಮೇಜಿನ ಮೇಲೆ ಕಾಲು ಇಟ್ಟು ತೂಕಡಿಸುತ್ತಿದ್ದ ಏಕಾಂಗಿ ಪುರುಷನನ್ನು ಕಂಡು, ವಿನಯದಿಂದ ''ಸ್ಸಾರ್'' ಎಂದ.

ಬೆಚ್ಚಿ ಬಿದ್ದ ಆತ ''ಯಾರು, ಏನು?'' ಅಂತ ಗಾಭರಿಯಿಂದ ಎದ್ದ. ''ನಾನು ಸಾರ್; ಈ ಮಲೇರಿಯಾಗೆ ಇಲ್ಲಿ ಮೆಡಿಸನ್ ಕೊಡ್ತಾರಂತೆ; ಹುಡುಕಿಕೊಂಡು ಬಂದಿದ್ದೇನೆ ಸಾರ್'' ಎಂದ ಬೆವರು ವರೆಸಿಕೊಳ್ಳುತ್ತಾ.

''ಹೌದೇ, ಕೂತ್ಕೊಳ್ಳಿ! ಎಲ್ಲಿ Papers ಎಲ್ಲಾ ಕೊಡಿ''

''ನಿಮಗೆ ಎಷ್ಟು ದಿನದಿಂದ ಮಲೇರಿಯಾ ಜ್ವರ?'' ಪೇಪರ್ ನೋಡಲು ಕನ್ನಡಕ ಸಿಕ್ಕಿಸಿಕೊಳ್ಳುತ್ತಾ ಕೇಳಿದ ಆತ.

''ನನಗಲ್ಲ ಸಾರ್, ನಮ್ಮಕ್ಕನಿಗೆ'' ವಿಶ್ವ ತಕ್ಷಣ ಹೇಳಿದ

''ಆಸಾಮಿ ಪೇಪರ್ ನೋಡಲೇ ಇಲ್ಲ'' ಇಲ್ಲಿ ಪೇಷಂಟಿಗೇ ಔಷಧಿ ಕೊಡೋದು. ಅವರ್ನೇ ಕರ್ಕೊಂಡು ಬನ್ನಿ ಹೋಗಿ.

ವಿಶ್ವನಿಗೆ ನಖಶಿಖಾಂತ ಸಿಟ್ಟು ಏರಿತು, ''ಅಲ್ರೀ 106, 107 ಡಿಗ್ರಿ ಜ್ವರ ಹೊಡೆದು ಸುಸ್ತಾಗಿರೋ ಪೇಷಂಟ್‌ನ ಇಲ್ಲಿಗೆ ಹ್ಯಾಗ್ರೀ ಕರ್ಕೊಂಡು ಬರೋದು? ಪದ್ಮನಾಭನಗರದಿಂದ ಇಲ್ಲಿಗೆ ಬರೋಕ್ಕೆ ಆಂಬ್ಯುಲೆನ್ಸ್ ತರಬೇಕು ಅಷ್ಟೆ. ಇಲ್ಲಿ ಎಲ್ಲಾ ವಿವರಗಳೂ ಇವೆ. ಓದಿ ನೋಡಿ ಔಷಧಿ ಕೊಡಿ.''

ಆತ ದುರುಗುಟ್ಟಿ ನೋಡಿದ. ''ನೋಡಿ ಮಿಸ್ಟರ್, ನಿಮ್ಮ ಅನುಕೂಲ, ಅನಾನುಕೂಲ ನಮ್ಗೆ ತಿಳೀದು, ಇಲ್ಲಿರೋ ರೂಲ್ಸ್ ಪ್ರಕಾರ ಪೇಷಂಟಿಗೆ ಮಾತ್ರ ಔಷಧಿ ಕೊಡಬೇಕು. ಈ ರಿಜಿಸ್ಟರ್‌ನಲ್ಲಿ ಅವರ ಹೆಸರು, ವಿಳಾಸ, ವಯಸ್ಸು, ಖಾಯಿಲೆ ಬಂದ ದಿನ, ವಾರ, ತಿಥಿ, ಎಲ್ಲಾ ಗುರುತು ಹಾಕಿ ಅವರ ಕೈಗೇ ಔಷಧಿ ಕೊಡ್ಬೇಕು ಅಂತ ಇರೋದು, ಈ ಆಫೀಸು 5 ಗಂಟೇ ತನಕ ತೆರೆದಿರುತ್ತೆ. 1-2 ಊಟದ ಸಮಯ. ಆಮೇಲೆ ಕರ್ಕೊಂಡು ಬನ್ನಿ'' ಮತ್ತೆ ಕಾಲುಗಳನ್ನು ಮೇಜಿನ ಮೇಲಿಟ್ಟು ಹಿಂದಕ್ಕೆ ಒರಗಿದ.

ವಿಶ್ವನಿಗೆ ಮೈಯೆಲ್ಲಾ ಉರಿಯಿತು. ಧಢ ಧಢ ಮೆಟ್ಟಿಲಿಳಿದು ಬಂದ. ಅಲ್ಲೇ ಆ

ಕೊಳಕು ಕಲ್ಲಿನ ಮೇಲೆ ಆ ಪಂಪುಧಾರಿ ಹಲ್ಲು ಚುಚ್ಕೋತ ಕೂತಿದ್ದ. ವಿಶ್ವನ್ನ ನೋಡಿ ಹಲ್ಲು ಕಿರಿದ. ವಿಶ್ವ ಮಾತಾಡದೆ ಎಲ್ಲಾ ಸಿಟ್ಟನ್ನು ತನ್ನ ಮೊಪೆಡ್ ಕೊಟ್ಟ 'ಕಿಕ್'ನಲ್ಲಿ ತೋರಿಸಿದ. ಅದು ತಕ್ಷಣ Start ಆಯ್ತು. ಅವ ''ಯಾಕೋ ಮುನ್ಸಕೊಂಡು ಓಗ್ತಿರೋ ಅಂಗೈತೆ ಅಲ್ಲಪ್ಪಾ; ಹಾದಿ ತುಳ್ಕೊಂಡು ಕಾಲು ಹಾಕು, ಆ ವಯ್ಯನಿಗೆ ಒಂದೀಟು ಕೈ ಬಿಸಿ ಮಾಡಿದ್ರೆ ಆಗಿತ್ತು'' ರಾಗವಾಗಿ ಹಾಡಿದ.

''ಇದು ಸರ್ಕಾರದ ಆಫೀಸು ಜನಗಳ ಹಿತಕ್ಕೆ ಮಾಡಿರೋದು. ಇಲ್ಲಿ ಲಂಚ ಹ್ಯಾಗೆ ತಗೋತಾರೆ? ನಾನು ಈಗ್ಲೆ Complaint ಕೊಟ್ಟು ಹೋಗ್ತೀನಿ''

''ಅಯ್ಯೋ! ನನ್ನಪ್ಪಾ; ಏನಂತ ಕೊಟ್ಟೀ Complaint ಲಿ? ಅವನು ರೂಲ್ಸ ಹೇಳ್ದ ನಾನು ಕೇಳ್ಳಿಲ್ಲ'' ಅಂತೀಯಾ?

ವಿಶ್ವ ಎರಡು ನಿಮಿಷ ಯೋಚಿಸಿದ ಬೆಳಿಗ್ಗೆಯಿಂದ ಹುಚ್ಚು ನಾಯಿ ತರಹ ಅಲೆದು ಉಪಯೋಗ ಏನಾಯ್ತು? ಕೆಲಸವಾಗಲಿಲ್ಲ. Be a Roman in Rome ''ಇಲ್ಲಿ ಬಾಪ್ಪಾ, ನಿನ್ನ ಹತ್ರ ಸ್ವಲ್ಪ ಮಾತಾಡಬೇಕು'' ಅಂದ. ಪಂಪ್‌ವಾಲ ಬಂದ .

''ಏನು ಸೋಮಿ?''

''ನೀನೇ ಹೇಳು, ಎಷ್ಟು ಕೊಟ್ರೆ ಸರಿಯಾದೀತು?'' ಎಂದ

''ಹಾಗ್ಬನ್ನಿ ದಾರೀಗೆ. ನಡೀರಿ ಮೇಲೆ'' ಇಬ್ರೂ ತಿರುಗಿ ಮಹಡಿ ಹತ್ತಿದರು, ಪಂಪಾವಾಲನ್ನ ನೋಡಿದ ತಕ್ಷಣ ಆರಾಮಾಸೀನನಾಗಿದ್ದ ಅಧಿಕಾರಿ ತಟ್ಟನೆ ಸರಿಯಾಗಿ ಕುಳಿತ. ''ಏನ್ ನಿಂಗಣ್ಣ; ಇಷ್ಟು ದೂರ'' ಅಂದ. ಹಲ್ಲು ಕಿರಿದ...

''ಅದ್ಯಾಕೆ ಬಸಣ್ಣ ಈ ವಯ್ಯನ್ನ ಅಂಗೇ ಕಳಸ್ತಾ ಇದ್ದಿ! ಪಾಪ! ತಂಗೀಗೆ ಜರಾ ಬಂದೈತಿ ಎಚ್ಚು ಕಡಿಮೆ ಆದ್ರೆ ಏನ್ಗತಿ! ರೂಲ್ಸನ ಸ್ವಲ್ಪ ಸರಿಮಾಡ್ಕೊಬೇಕಪ್ಪಾ!''

''ನಾನೇನು ಮಾಡ್ಲಿ ನಿಂಗಣ್ಣ; ಸ್ವಲ್ಪ ಎಚ್ಚು ಕಡಿಮೆ ಆದ್ರೆ ನಂ ತಲೇಗೆ ಬರ್ತೈತಿ. ಈ ಪಾಟಿ ದೊಡ್ಡ ಪಟ್ನದಲ್ಲಿ ಮಲೇರಿಯಾಗೆ ಔಷಧಿ ಸುಮ್ನೆ ಕೊಡಕ್ಕೆ ಆಗತ್ಯಾ?''

ವಿಶ್ವನ ಬುದ್ಧಿಗೆ ಮಿಂಚು ಹೊಡೆದಂತಾಯಿತು: ''ಸ್ವಾಮಿ, ನೀವು ಹೇಳೋದೂ ನ್ಯಾಯ ನಾನು ಹೇಳ್ತಾ ಇರೋದೂ ನ್ಯಾಯ. Middle path ಒಂದಿದೆ. ನಿಮ್ಗೆ ಹ್ಯಾಗೂ ಲಂಚ್ ಬ್ರೇಕ್ ಇದೆ. ನಾನು ನಿಮ್ಮನ್ನ ನನ್ನ ಮೊಪೆಡ್‌ನಲ್ಲಿ ಕರ್ಕೊಂಡು ಹೋಗಿ, ಮತ್ತೇ ಕರ್ಕೊಂಡು ಬಂದುಬಿಡ್ತೀನಿ ನೀವು ರೋಗಿಗೇ ಮದ್ದು ಕೊಡಿ. ನಿಮ್ಗೂ ನೆಮ್ಮದಿ. ನಮಗೂ ಒಳ್ಳೆಯದು'' ಎಂದ.

ಆತ ಯೋಚಿಸಿದ. '' ಆಯ್ತು! ನಡೀರಿ'' ಎನ್ನುತ್ತಾ ಎದ್ದ. ರಿಜಿಸ್ಟರ್, ಮದ್ದು, ಇತ್ಯಾದಿಗಳನ್ನು ತೆಗೆದುಕೊಂಡು ಆಫಿಸಿಗೆ ಬೀಗ ಹಾಕಲು ಹೊರಟ. ಪಂಪವಾಲ ವಿಶ್ವನಿಗೆ ಸನ್ನೆ ಮಾಡಿದ ''ಹಿ... ಹಿ... ಕೆಲ್ಸ ಆಯ್ತಲ್ಲ, ಮಾಮೂಲು ಕೊಟ್ಬಿಡಿ'' ಅಂದ. ವಿಶ್ವ 50ರ ಒಂದು ನೋಟು ಕೊಟ್ಟ. ''ಸ್ವಾಮಿ ಅವ್ರಿಗೂ ಕಟ್ ಉಂಟು'' ಅಂದ. ಮತ್ತೊಂದು ಐವತ್ತರ ನೋಟು ಕೊಟ್ಟ....

ರಸ್ತೇಲಿ ಹೋಗುವಾಗ ಹಿಂದೆ ಕುಳಿತಾತ ಕೇಳಿದ ''ನಿಮ್ಗೆ ಹ್ಯಾಗೆ ಪರಿಚಯ ಸಾರ್ ಈ ನಿಂಗಣ್ಣ! ಈ ಕಡೆ 'ದಾದ' ಅವ್ನು ಹಡಿತರ್ಲೆ. ಅವನ್ನ ಯಾಕೆ ಹಿಡಕೊಂಡು ಬಂದ್ರಿ''?

ವಿಶ್ವ ಉತ್ತರ ಕೊಡಲಿಲ್ಲ. ನೀತಿ ಪಾಠ ನೆನಪು ಮಾಡಿಕೊಂಡ. ''ಕಷ್ಟ ಪಟ್ಟರೆ ಫಲವುಂಟು,'' ''ಮುಂಗೈ ಆಡಿದರೆ ಮೊಣಕೈ ಆಡುತ್ತೆ.''

"..... ನಾನು ಹೇಳ್ತೀನಿ!"

ಹೆಚ್. ಗೋಪಾಲಕೃಷ್ಣ

ಫ್ಯಾಕ್ಟರಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ವರ್ಗಕ್ಕೆ ನೀವು ಸೇರಿದವರಾಗಿದ್ದರೆ ಟ್ರೇಡ್ ಯೂನಿಯನ್ನುಗಳು (Trade Union) ನಿಮಗೆ ಗೊತ್ತಿರಬೇಕು. ಅದೇ ರೀತಿ ಟ್ರೇಡ್ ಯೂನಿಯನ್ನುಗಳ ಲೀಡರುಗಳೂ ಸಹ. ನಾನು ಫ್ಯಾಕ್ಟರಿಗೆ ಸೇರಿದ ಹೊಸತರಲ್ಲಿ ನನ್ನನ್ನೂ ಒಬ್ಬ ಲೀಡರು ಮಾಡುವ ಎಲ್ಲ ಹುನ್ನಾರಗಳನ್ನೂ ಆಗಿನ ಲೀಡರುಗಳು ನಡೆಸಿದ್ದರು. ಆರಡಿ ಎತ್ತರ, ನೂರು ಕೇಜಿ ಮೇಲಿನ ತೂಕ, ಒಂದೂಕಾಲು ಕೇಜಿಯಷ್ಟು ತೂಗು ಮೀಸೆ - ಮುಖ್ಯವಾಗಿ ಇವಿಷ್ಟು ಇದ್ದರೆ ಆತ ಟ್ರೇಡ್ ಯೂನಿಯನ್ ಲೀಡರಾಗಲು ಹೇಳಿ ಮಾಡಿಸಿದ ವ್ಯಕ್ತಿ ಎಂಬ ನಂಬಿಕೆ ಆ ಕಾಲದಲ್ಲಿ ಇತ್ತಂತೆ. (ಇದು ತೀರ ಈಚೆಗೆ ನನಗೆ ತಿಳಿದುಬಂದ ಸಂಗತಿ) ಅದು ಹೇಗೋ ಅದೃಷ್ಟ ತೊಡರುಗಾಲು ಹಾಕಿ ನಾನು ಲೀಡರು ಆಗಲಿಲ್ಲ. ಆದುದರಿಂದ "ರೀಗ್ರೇಟ್ಸ್" ಇಲ್ಲದಿದ್ದರೂ ಕೆಲವು ಸಲ ಹೊಟ್ಟೆ ಉರಿಯುತ್ತೆ. ಇದು ಅಂತಿರಲಿ ಬಿಡಿ.

ಈಗ ನಾನು ಕೆಲಸಕ್ಕೆ ಸೇರಿದ ಹೊಸತರಲ್ಲಿ ಇದ್ದ ನಮ್ಮ ಟ್ರೇಡ್ ಲೀಡರ್‌ನ ಕಡೆ ನಿಮ್ಮನ್ನ ಕರಕೊಂಡು ಹೊಗ್ತೀನಿ. ಕೋಲಾರದ ಕಡೆಯ ಒಕ್ಕಲು ಮನೆತನಕ್ಕೆ ಸೇರಿದವನು ಈತ. ಅದೆಂತಹದೋ ರೆಡ್ಡಿ ಅಂತ ಆತನ ಹೆಸರು. ಕೋಲಾರದ ಕಡೆ ಜನರಲ್ಲಿ ನೂರಕ್ಕೆ ನೂರರಷ್ಟು ಜನರೂ ಲೀಡರಾಗಲೆಂದೇ ಹುಟ್ಟಿರುವವರು ಎಂಬ ನಂಬಿಕೆ ಈ ಜನರಲ್ಲಿದೆಯಂತೆ. ಅದೂ ಬೆಂಗಳೂರಿಗೆ ಬಂದ ವಾಸ್ತವ್ಯ ಹೂಡಿರುವವರಲ್ಲಿ ಈ ನಂಬಕೆ ಜಾಸ್ತಿಯಂತೆ - ಇದು ನನಗೆ ಅಷ್ಟಾಗಿ ತಿಳಿಯದ ಸಂಗತಿ. ಮೇಲಿನ ಸಂಗತಿ ನನಗೆ ಕೋಲಾರದ ಕಡೆಯವರೇ ಹೇಳಿದ್ದು. ಈ ಲೀಡರಾಗುವ ಭ್ರಮೆಯ ಸಂಗಡ ಸಮಯ ಸಂದರ್ಭಗಳ ವಿವೇಚನೆ ಇಲ್ಲದೇ ಮಾತನಾಡಲೇಬೇಕು ಎಂಬ ಚಪಲ ಬೇರೆ. ಅದೂ ಎದುರಿಗೆ ಜನರ ತಲೆ ಮತ್ತು ಮೈಕು ಕಂಡರೆ ಈ ರೋಗ ಉಲ್ಬಣ! ಹೋಗಲಿ ಮಾತನಾಡಿಕೊಂಡು ಹಾಳಾಗಲಿ ಎಂದರೆ ಕನ್ನಡದ ಭುವನೇಶ್ವರಿ ಸರಿಯಾಗಿ ನಾಲಗೆಗೆ ಸೂಟ್ ಆಗುವುದಿಲ್ಲ; ಇದನ್ನು 'ಡಿಫೆಕ್ಟು' ಅಂತ ಈ ಲೀಡರು ಅರಿತಿರಲಿಲ್ಲ; ಬದಲಿಗೆ ಈತನ ಭಾಷಣ ಜನರಿಗೆಲ್ಲಾ ಅತ್ಯಂತ ಅಚ್ಚುಮೆಚ್ಚಾಗಿದೆ ಎಂಬ ಸುಳ್ಳು ನಂಬಿಕೆ ಬೇರೆ ಈತನ ಮನಸ್ಸಿನಲ್ಲಿ ಆಳವಾಗಿ ಬೇರು ಬಿಟ್ಟು ಭದ್ರವಾಗಿ ಕೂಡಿಕೊಂಡ ಹಾಗಿತ್ತು.

ಫ್ಯಾಕ್ಟರೀಗೆ ಸೇರಿದ ಎರಡನೇ ವಾರವೋ ಮೂರನೇ ವಾರವೋ ಈತನ ಮೊದಲ ಭಾಷಣ ಕೇಳಿದೆ. ಟ್ರೇಡ್ ಯೂನಿಯನ್‌ಗಳ ಲೀಡರುಗಳು ಯಾವಾಗಲೂ ಮಾತನಾಡಲು ಆರಿಸಿಕೊಳ್ಳುತ್ತಿದ್ದ ಜಾಗವೆಂದರೆ ಕಾರ್ಖಾನೆಯ ಮುಂಬಾಗಿಲು. ಈ ಮುಂಬಾಗಿಲೇ ಯಾಕೆ ಅಂದರೆ ಈ ಗೇಟಿನ ಮೂಲಕವೇ ಕಾರ್ಮಿಕರ ಪ್ರವೇಶ ಮತ್ತು ನಿರ್ಗಮನ. ಕಾರ್ಖಾನೆ ಹತ್ತಿರದಲ್ಲಿ ನೆಲೆಸಿರುವವರಾಗಲೀ ಕಾರ್ಖಾನೆಯಿಂದ ದೂರ ನೆಲೆಸಿ ಕಾರ್ಖಾನೆ ಬಸ್ಸುಗಳಲ್ಲಿ ಕೆಲಸಕ್ಕೆ ಬಂದು ಹೋಗುವವರಿಗಾಗಲೀ ಇದೇ ಗೇಟು. ಷಿಫ್ಟ್ ಕೆಲಸ ಮುಗಿಸಿ ಕಾರ್ಮಿಕರು ಆಚೆ ಬರಬೇಕಾದರೆ ಇಂತಹ ಮೀಟಿಂಗುಗಳಿಗೆ ಕಾರ್ಮಿಕರು, ಕಾರ್ಮಿಕನಾಯಕರು, ಟ್ರೇಡ್ ಯೂನಿಯನ್‌ಗಳು ಹಾಗೂ ಆಡಳಿತವರ್ಗ,

ಎಲ್ಲರೂ ಸೇರಿ ಕೂಗುವ ಹೆಸರು, ಇಟ್ಟಿರುವ ಹೆಸರು 'ಗೇಟ್ ಮೀಟಿಂಗ್' ಅಂತ. ಗೇಟಿನಿಂದ ಒಂದು ಹದಿನೈದು ಗಜ ದೂರದಲ್ಲಿ ಟೇಬಲ್ಲುಗಳನ್ನು ಜೋಡಿಸಿ ಅದಕ್ಕೊಂದು ಮೈಕು ಸಿಕ್ಕಿಸಿರುತ್ತಾರೆ. ಮೈಕಿನಿಂದ ಲೌಡ್ ಸ್ಪೀಕರುಗಳಿಗೆ ಕನೆಕ್ಷನ್ ತೆಗೆದುಕೊಂಡು ಇವುಗಳನ್ನು ಕಾರ್ಮಿಕರ ಬಳಿ ಇರಿಸಿರುತ್ತಾರೆ.

ಕೆಲವು ಕಾರ್ಖಾನೆಗಳಲ್ಲಿ ಈಚೆಗೆ ಟೇಬಲ್ಲುಗಳ ಬದಲಿಗೆ ರೆಡಿಮೇಡ್ ಪೋಡಿಯಂಗಳು ಬಂದಿವೆ. ಮತ್ತೆ ಕೆಲವು ಕಾರ್ಖಾನೆಗಳಲ್ಲಿ ಟೇಬಲ್ಲೂ ಸಹ ಇಲ್ಲದೆ ಎರಡು ಸೈಜ್ ಕಲ್ಲಿನ ಮೇಲೆ ನಿಂತು ಭಾಷಣ ಹೊಡೆಯುತ್ತಾರೆ. ಈ ಗೇಟ್ ಮೀಟಿಂಗ್ ಪದ್ಧತಿ ಬಹುಶಃ ಕಾರ್ಖಾನೆಗಳು ಹುಟ್ಟುವ ಮೊದಲೇ ಹುಟ್ಟಿದೆ ಎಂದು ನನ್ನ ನಂಬಿಕೆ. ಇದಕ್ಕೆ ಆಧಾರವೆಂದರೆ ಮನೆ ಗೇಟುಗಳ ಮುಂದೆ ನಿಂತು ಅಕ್ಕಪಕ್ಕದ ಹೆಂಗಸರು ಮೀಟಿಂಗ್ ನಡೆಸುವುದು!

ಪ್ರಸ್ತುತ ಗೇಟ್ ಮೀಟಿಂಗ್ ಪ್ರೇರಣೆ ಎಂದರೆ ಈತನ ಸಂಘಕ್ಕೆ ಸೇರಿದ ಕಾರ್ಮಿಕನೊಬ್ಬನಿಗೆ ಆಡಳಿತವರ್ಗ ಯಾವುದೋ ಕಾರಣಕ್ಕೆ ಚಾರ್ಜ್‌ಷೀಟ್ (Charge Sheet) ನೀಡಿತ್ತು ಎಂಬುದು. ಅಂದಹಾಗೆ ಈ ಗೇಟ್ ಮೀಟಿಂಗ್‌ಗಳಿಗೆ ಇಂತಹದೇ ವಿಷಯ ಆಗಬೇಕೆಂದಿಲ್ಲ. ಕಾರ್ಖಾನೆ ಕ್ಯಾಂಟಿನ್‌ನಲ್ಲಿ ಅಡಿಗೆ ಸರಿಯಿಲ್ಲ ಎಂಬ ಕಾರಣದಿಂದ ಹಿಡಿದು ಅಂಟಾರ್ಟಿಕಾದಲ್ಲಿನ ಭಾರತೀಯ ವಿಜ್ಞಾನಿಗೆ ಒಂದು ಕೋಳಿಮೊಟ್ಟೆ ಕಡಿಮೆ ನೀಡಲಾಗಿದೆ ಎಂಬುವವರೆಗೆ ಗೇಟ್ ಮೀಟಿಂಗ್‌ಗಳು ನಡೆಯುತ್ತವೆ. ಕೆಲವು ಬಾರಿ ಕಾರ್ಮಿಕರ ಸಮಸ್ಯೆಗಳಿಗೆ ನೇರವಾಗಿ ಸಂಬಂಧಿಸಿದ ವಿಷಯ ಇರುವುದು (ಸಂಬಳ ಹೆಚ್ಚು ಮಾಡಿ. ಬೋನಸ್‌ಕೊಡಿ ಎಂಬಂತಹ ಬೇಡಿಕೆಗಳು). ಕೆಲವು ಬಾರಿ ಕಾರ್ಮಿಕರಿಗೂ ಪ್ರಸ್ತುತ ಸಮಸ್ಯೆಗೂ ಸಂಬಂಧವೇ ಇಲ್ಲದಿರಬಹುದು (ಬಹುರಾಷ್ಟ್ರೀಯ ಸಂಸ್ಥೆಗಳು ಭಾರತ ಪ್ರವೇಶಿಸಿರುವ ಬಗೆಗೆ, ಆಫ್ರಿಕಾದಲ್ಲಿ ನಡೆದ ಜನಾಂಗೀಯ ಕಲಹದವರೆಗೆ - ಈ ವಿಷಯ ಹಬ್ಬಬಹುದು).

ರೆಡ್ಡಿ ಟೇಬಲ್ಲು ಏರಿದ. 'ಘೋಷನೆ ಹೇಳ್ತೀನಿ ನೀವೂ ಹೇಳಿ' ಈತನಿಗೆ 'ಳ'ಕಾರ ಹೊರಡದು ಎಂದು ಆಗ ತಿಳಿಯಿತು. 'ಳ' ಕಾರ ಬರುವೆಡೆಯಲ್ಲಿ ಈ 'ಲ' ಕಾರ ಉಪಯೋಗಿಸಿ ಮಾಡಿದ ಭಾಷಣದ ಒಂದು ತುಣುಕು 'ಘೋಷಣೆ' ನಂತರ ಬರುತ್ತೆ.

'ವಿಸ್ವ ಗಾರ್ಮಿಗರೇ' ಅಂತ ಆತ ಹೇಳಿದ ನಂತರ 'ಹೊಂದಾಗಿರಿ' ಎಂದು ವಿಸ್ವಗಾರ್ಮಿಗರು ಸೇರಿಸಿದರು.

ಬೆಂಗಳೂರಿನ ಸುಮಾರು ಕಾರ್ಖಾನೆಗಳ ಲೀಡರುಗಳು ಆ ಕಾಲದಲ್ಲಿ ಕೇರಳದವರು ಅಥವಾ ತಮಿಳುನಾಡಿನವರು. ಅದರಿಂದ ಘೋಷಣೆಗಳಲ್ಲಿ ಕಾರ್ಮಿಕರು - ಗಾರ್ಮಿಕರು ಆಗುತ್ತಿದ್ದರು; ವಿಶ್ವ-ವಿಸ್ವ ಆಗುತ್ತಿತ್ತು. ನೀತಿಗೆಟ್ಟ ಆಡಳಿತವರ್ಗ 'ನೀರಿಕೆಡ್ಡ ಹಾಡಲಿತ ವರ್ಗ' ಆಗುತ್ತಿತ್ತು. ಕೆಲವು ಘೋಷಣೆಗಳ ಪ್ರತಿ ಮೀಟಿಂಗ್‌ನಲ್ಲಿಯೂ ಕೇಳಿಸುತ್ತಿತ್ತು. ಅವುಗಳಲ್ಲಿ 'ನೀತಿಗೆಟ್ಟ ಆಡಳಿತವರ್ಗಕ್ಕೆ ಧಿಕ್ಕಾರ' 'ವಿಸ್ವಗಾರ್ಮಿಗರೇ ಹೊಂದಾಕಿರಿ' ''ಓರಾಠ ಓರಾಠ ಘೆಲ್ಲುವ್ವವ್ವರೆಕೂ ಓರಾಟ'' ಬಹಳ ಪ್ರಮುಖವಾದವು. ಈ ಘೋಷಣೆಗಳು ಸರಿ ಇಲ್ಲ ಅಂತ ಅದ್ಯಾವ ಕನ್ನಡಿಗನೂ ಈ ತನಕ 'ಕೇತೆ' ತೆಗೆದಿಲ್ಲ! ಆತನ 'ಘೋಸನೆಗಳ' ನಂತರ ಆತನ ಭಾಸಣ ಆರಂಭ ಆಗಿದ್ದು ಹೀಗೆ:-

ಖಾರ್ಮಿಖರೇ,

ನಮ್ಮ ನೀತಿಕೆಠ್ಠ ಹಾಠಳಿತ ವರ್ಗ ನಮ್ಮ ಜೊತೆಯ ಕೆಲಸಗಾರನಿಗೆ ಚಾರ್ಜ್‌ಷೀಟ್ ನೀಡಿವೆ. ಈ ರೀತಿ ದಬ್ಬಾಳಿಕೆ ಕೂಡದು ಅಂತ ನಾವು ಆಡಳಿತ ವರ್ಗಕ್ಕೆ ಹೇಳ್ತಾನೇ ಇದೀವಿ. ಅವರು ಕೇಳ್ತಿಲ್ಲ. ನಾವು ಮಾಡೋದು ಸರಿ ಅಂತ ಅವರು ಹೇಳ್ತಾರೆ. ಅವರು ಹೇಳ್ತಾರೆ ಅಂತ ನಾವು ಅದನ್ನ ಹೊಟ್ಟೇಲಿ ಹಾಕ್ಕೋಕೆ ಆಗ್ತದಾ?.... ಈ ದಾಟಿಯಲ್ಲಿ ಸುಮಾರು ಇಪ್ಪತ್ತೈದು ನಿಮಿಷ ಆತ ಭಾಷಣ ಬಿಗಿದ. ಪ್ರತಿ ಐದನೇ ವಾಕ್ಯಕ್ಕೆ 'ಗಂಟಾಗೋಸ'ವಾಗಿ ಆಡಳಿತವರ್ಗಕ್ಕೆ ಹೆಚ್ಚರಿಕೆ ನೀಡಿದ. 'ಳ'ಕಾರ ಬರುವೆಡೆಯಲ್ಲಿ ಈತ 'ಲ' ಕಾರ ಪ್ರಯೋಗಿಸುವುದು ಕಂಡು ಕೆಲವು ಕನ್ನಡದ ಕಾರ್ಮಿಕರು ಚಪ್ಪಾಳೆ ತಟ್ಟಿ ನಗುವುದೂ ಈತ ಅದರಿಂದ 'ಹುರಿದುಂಬಿತ'ನಾಗಿ (ಭಾಷಾಶಾಸ್ತ್ರಗಳು ಈ ಪದ ಪ್ರಯೋಗಕ್ಕೆ ಕ್ಷಮಿಸಲಿ) ಮತ್ತೆ ಮತ್ತೆ ''ಹೇಲುತ್ತಲೇ'' ಹೋಗುವುದು ನಡೆಯಿತು.

ಈ ರೀತಿ ಐದಾರು ಮೀಟಿಂಗು ನಡೆಸುವ ಹೊತ್ತಿಗೆ ರೆಡ್ಡಿ ನನಗೆ ಪರಿಚಿತನಾದ. ಇಂಗ್ಲಿಷ್ ಬುಲೆಟನ್ (ಹೀಗೆಂದರೆ ಸುದ್ದಿಪತ್ರ ಅಂತ ಅರ್ಥ. ಕಾರ್ಖಾನೆಗಳಲ್ಲಿ ತಿಂಗಳಿಗೆ ಕನಿಷ್ಠವೆಂದರೆ ಎರಡಾದರೂ ಬುಲೆಟನ್‌ಗಳನ್ನು ಕಾರ್ಮಿಕ ಸಂಘಗಳು ನೀಡುತ್ತವೆ. 'ಬುಲೆಟನ್' ನೀಡದ ಕಾರ್ಮಿಕ ಸಂಘ ಕಾರ್ಮಿಕ ಸಂಘವೇ ಅಲ್ಲ ಎಂಬ ನಂಬಿಕೆ ಕಾರ್ಮಿಕ ನಾಯಕರಲ್ಲುಂಟು. ಈ ಬುಲೆಟನ್‌ಗಳ ಬಗ್ಗೆ ಮತ್ತೊಮ್ಮೆ ತಮಗೆ ವಿವರವಾಗಿ ಕೊರೆಯಲಿದ್ದೇನೆ)ಗಳನ್ನು ತಮ್ಮ ನಾಯಕರಿಂದ ಬರೆಸಿಕೊಂಡು ಅದನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿಕೊಳ್ಳಲು ಬರುತ್ತಿದ್ದರಿಂದ ಆತನ ಪರಿಚಯ ಸಹಜವಾಗಿಯೇ ಆಯಿತು. ಅಂದಹಾಗೆ ಈ ಕಾರ್ಮಿಕ ಸಂಘಗಳ ಅಧ್ಯಕ್ಷರುಗಳು ಎಂದೂ ಕಾರ್ಖಾನೆ ಕಾರ್ಮಿಕರಾಗಿರುವುದಿಲ್ಲ. ಯಾವುದಾದರೂ ರಾಜಕೀಯ ಪಕ್ಷದ ನೇತಾರರಾಗಿರುತ್ತಾರೆ (ಶೇ. ಅರವತ್ತರಷ್ಟು ನಾಯಕರು ಕಮ್ಯೂನಿಸ್ಟ್ ಬಣಕ್ಕೆ ಸೇರಿದವರು). ಒಂದು ಸಲ ತರ್ಜುಮೆ ಕೆಲಸ ಮುಗಿಸಿ ಆತನನ್ನ ಕೂರಿಸಿಕೊಂಡು ಆ ಮಾತಿಗೆ ಎಳೆದೆ.

'ಏಮಂಡಿ ರೆಡ್ಡಿಗಾರೂ ಕೊಂಚ ಲಾಂಗ್ವೇಜ್ ರೈಪ್ (Language Ripe) ಚೇಸ್ಕೊಂಡಿ....' ಅಂದೆ. ಭಾಷೆಸುಧಾರಿಸಿಕೊಳ್ಳಿ ಎಂಬ ಸಲಹೆ ನೀಡುವ ಧೈರ್ಯ ಅದು ಹೇಗೆ ಬಂತೋ ನನಗೆ ತಿಳೀದು.


'ಏಕೆ ಸಾರ್ ಏನಾಯಿತು ನನ್ನ ಭಾಷೆಗೆ ಹೇಳಿ' ಆತನ ನನ್ನ ಮಾತುಕತೆ ಕನ್ನಡ-ತೆಲುಗಿನಲ್ಲಿ ನಡೆದದ್ದು. ಇಲ್ಲೂ ಳಕಾರ ಲಕಾರ ಆಗಿತ್ತು!

ಆತನಿಗೆ ಬಿಡಿಸಿ ಬಿಡಿಸಿ ''ಹೇಳ್ತೀನಿ'' ಎಂಬುದರಲ್ಲಿ 'ಳ'ಗೆ ಬದಲು 'ಲ' ಬಂದರೆ ಎಂತಹ ಅಪಾರ್ಥ ಆಗುತ್ತೆ ಅಂತ ವಿವರಿಸಿದೆ. ಇಪ್ಪತ್ತು ವರ್ಷ ಈ ಲೈನ್‌ನಾಗೇ ಇದ್ದೀವಿ ಸಾರ್. ಯಾವ ಬೋಳಿಮಗನೂ ಹೀಗೆ ಹೇಳಿಲ್ಲ. ನಿಮ್ಮ ಕಿವೀನ ಅದು ಯಾವದಾದರೂ ಡಾಕ್ಟ್ರು ಹತ್ತಿರ ತೋರಿಸಿ ಅಂತ ನಾನು ಗಂಟಾಗೋಸವಾಗಿ ಹೇಳ್ತೀನಿ....'' ಅಂದ- ಮತ್ತೆ 'ಳ' ಗೆ ಲ! ಈ ಗಂಟಾಗೋಸ ಎಂಬ ಪದವಿಲ್ಲದೇ ಒಂದೇ ಒಂದು ಮೀಟಿಂಗು ನಡೆದದ್ದೂ ನನ್ನ ನೆನಪಿನಲ್ಲಿ ಇಲ್ಲ! ಅವನೆದುರು ನಿಂತು ದೊಡ್ಡ ನಮಸ್ಕಾರ ಹೊಡೆದೆ. 'ಭಾಷೆ ಇರೋದು ಸಂಪರ್ಕಕ್ಕೆ. ನೀವು ಹೇಗೆ ಬೇಕಾದರೂ ಹೇಳಿ. ಅದು ಜನಕ್ಕೆ ಒಪ್ಪಿಗೆ

ಆದರೆ ಸರಿ....' ಅಂದರೆ - ತಪ್ಪು ಒಪ್ಪಿಕೊಂಡೆ.

'ಹಂಗೇಳಿ ಮತ್ತೆ' - ಅವನ ಮುಖದಲ್ಲಿ ಗೆಲುವಿನ ನಗೆ ಇತ್ತು. ಮೀಸೆಯಲ್ಲೇ ನಗುತ್ತಾ ಅವನ ಕೈಕುಲುಕಿ ಕಳಿಸಿದೆ.

ರೆಡ್ಡಿ ರಿಟೈರ್ ಆಗುವವರೆಗೂ ಆತನ 'ಲ' ಕಾರದ ನೂರಾರು ಭಾಷಣಗಳನ್ನು ನಮ್ಮ ಗೇಟಿನ ಮುಂದೆ ಕೇಳಿದ್ದೇ. ಕೊನೆಯವರೆಗೂ ಅಂದರೆ ಆತ ನಿವೃತ್ತನಾಗುವವರೆಗೂ ತನ್ನ ನಾಲಗೆಗೆ ನಿಷ್ಠನಾಗಿಯೇ ಇದ್ದ. ಹಲವಾರು ಸಲ ಪಾರ್ಟಿ ಬದಲಾಯಿಸಿದ್ದರೂ 'ಲ' ಕಾರದಿಂದ 'ಳ' ಕಾರಕ್ಕೆ ಆತ ಎಂದೂ ತಿರುಗಲೇ ಇಲ್ಲ! ಕೋಲಾರದ ಕಡೆಯ ಜನ ಕಾರ್ಖಾನೆಗೆ ಬಂದ ಮೇಲೆಯೇ ಕನ್ನಡದ ಕಸ್ತೂರಿ ಕಂಪು ಇಲ್ಲಿ ಹರಡಿದ್ದು ಎಂದು ಆತ ನಂಬಿದ್ದ. ರೆಡ್ಡಿ ಅಂದಕೂಡಲೇ ನನಗೆ ಪಕ್ಕನೆ ನೆನಪಿಗೆ ಬರುವುದು ಆತನ ಹೇಳ್ತೀನಿ ಭಾಷಣ! ನಮ್ಮ ನೆಲ ನಮ್ಮ ಜನ ತತ್ವವನ್ನು ಪಾಲಿಸಿದ್ದ ಆತನ ಕಡೆಯ ಒಂದು ಹಿಂಡೇ ಕಾರ್ಖಾನೆಯಲ್ಲಿತ್ತು ಎಂದು ಆತನನ್ನು ಬಲ್ಲವರು ಹೇಳುತ್ತಿದ್ದರು. ಏನೇ ಆದರೂ ಕೋಲಾರದವರ ಧೈರ್ಯವೇ ಧೈರ್ಯ!



''ಈ ರೂಮಿನಲ್ಲಿ ಬರೀ ಸರಳರೇಖೆಗಳೇ ಇವೆ. ನೀನು ಸ್ವಲ್ಪ ಇಲ್ಲಿ ಬರ್ತೀಯಾ ಸುಮಾ?''

ಗುಟ್ಟಾಯಣ ಗುಟ್ಟು ರಟ್ಟಾಯಣ

ಬೇಲೂರು ರಾಮಮೂರ್ತಿ

ಮೊನ್ನೆ ಶ್ರೀಕಂಠು ಮನೇಲಿ ಅನಂತಪದ್ಮನಾಭ ವ್ರತ ಇತ್ತು. ತುಂಬಾ ಜನ ಸೇರಿದ್ರು. ದೇವರ ಮೇಲಿನ ಭಕ್ತಿಯಿಂದಲ್ಲ. ಶ್ರಿಕಂಠ ಮಾಡಿಸೋ ನಳಪಾಲ ಮೆತ್ತ್ಗೋಕೆ. ಅಲ್ಲಿ ಒಂದು ಆಭಾಸ ನಡೀತು. ಎಲ್ರೂ ಊಟಕ್ಕೆ ಕೂತಿರುವಾಗ ತಾಲ್ಲೂಕ್ ಆಫೀಸ್ ಹೆಡ್ ಗುಮಾಸ್ತ ಗೋವಿಂದ ಮಾಡಿದ ಒಂದು ರಿಮಾರ್ಕು ಸಮಸ್ತ ಮಹಿಳೆಯರನ್ನು ಕೆಣಕಿತು. ಅವನು ಹೇಳಿದ್ದು ಇಷ್ಟೆ ''ತೆಗ್ ತೆಗೀರಿ ಹೆಂಗಸರ ಬಾಯಲ್ಲಿ ಗುಟ್ಟೆಲ್ಲಿ ನಿಲ್ಲುತ್ತೆ ಏನಾದ್ರೂ ನೀವು ಗುಟ್ಟೂಂತ ಹೇಳಿದ್ರೆ ಅದು ರಟ್ಟಾಗೋ ತನಕ ಅವರಿಗೆ ನೆಮ್ಮದಿ ಇರಲ್ಲ''. ಎಷ್ಟೇ ಮನಸ್ ಕೆಟ್ರೂ ಊಟ ಬಿಡೋಕೆ ಯಾರಿಗೂ ಮನಸ್ಸು ಬರಲಿಲ್ಲ. ಪಾಪ ಬೇಜಾರು ಮಾಡ್ಕೊಂಡು ಮಾಡ್ಕೊಂಡೇ ಹೊಟ್ಟೆ ತುಂಬಿಸಿಕೊಂಡರು. ಬಾಯಿತುಂಬಾ ಎಲೆ ಅಡಿಕೆ ಹಾಕ್ಕೊಂಡು ಮೆಲ್ಲುತ್ತಾ ಒಬ್ಬೊಬ್ರೇ ಗೋವಿಂದನ್ನ ತರಾಟೆಗೆ ತಗೊಂಡ್ರು. ಇನ್ನೇನು ಬೌನ್ಸರುಗಳು ಬಿದ್ರೂ ಬೀಳಬಹುದು ಅಂತ ಗೋವಿಂದು ಅಲ್ಲಿಂದ ಕಳಚ್‌ಕೊಂಡ.

ಮಹಿಳಾ ಸಂಘದ ರಾಧ, ಜಾನಕಿ, ಗೌರಿ, ಶ್ರೀಮತಿ, ಸುನಂದ ಇವರೆಲ್ಲ ಸುಮ್ನೆ ಕೂತ್ಕೊಳ್ಳೋಕಾಗ್ಲಿಲ್ಲ. ತಕ್ಷಣ ಒಂದು ತುರ್ತು ಸಭೆ ಕರೆದರು. ಒಂದು ಠರಾವು ಪಾಸ್ ಮಾಡಬೇಕು ಅಂದುಕೊಂಡರು. ಆದರೆ ದುರಾದೃಷ್ಟ ಸಭೆಗೆ ಯಾರೂ ಬರಲೇ ಇಲ್ಲ. ಇನ್ನೂರು ಸದಸ್ಯತ್ವ ಹೊಂದಿರೋ ಮಹಿಳಾ ಸಂಘದಲ್ಲಿ ಕಡೇಪಕ್ಷ ಐವತ್ತು ಜನರಾದರೂ ಇರ್ತಾರೆ. ಹಾಗಾಗಿ ಎಲ್ಲ ಸಭೆ, ಸಮಾರಂಭಗಳೂ ಯಶಸ್ವಿಯಾಗಿ ನಡಿಯುತ್ವೆ. ಒಂದೊಂದ್ಸಾರಿ ಆಹ್ವಾನ ಪತ್ರಿಕೇಲಿ ಡಿನ್ನರ್ ಹೋಸ್ಟೇಡ್ ಬೈ ಅಂತ ಯಾರಾದ್ದಾದರೂ ಹೆಸರು ಹಾಕಿರ್ತಾರೆ. ಅಂತಾ ಸಮಾರಂಭಗಳಿಗೆ ಜನ ಜಾಸ್ತಿ.

ಇಲ್ಲಿ ಮಹಿಳೆಯರ ಘನತೆಯ, ಗೌರವದ ಪ್ರಶ್ನೆ ಬಂದಿರುವಾಗ ಸಭೆಗೆ ಯಾರೂ ಬಂದಿಲ್ಲ ಅಂದರೆ ತೀರಾ ಅವಮಾನ. ಸರಿ ಎಷ್ಟೊತ್ತೂಂತ ಕಾಯೋದು ಪದಾಧಿಕಾರಿಗಳಾದ ಈ ಪಂಚಕನ್ಯೆಯರೇ ಸಭೆ ಪ್ರಾರಂಭ ಮಾಡಿದರು.

''ಅಲ್ಲರೀ ಗೋವಿಂದ ಎಲ್ರ ಮುಂದೇನೂ ಹಾಗನ್ನಬಹುದಾ'' ಜಾನಕಿಯಿಂದ ಪ್ರಥಮ ಆಕ್ಷೇಪ ಬಂತು.

'ಎಲ್ಲೋ ಒಬ್ರು... ಇಬ್ರು ಆತರ ಇರಬಹುದು. ಆದರೆ ಅದನ್ನು ಹೀಗೆ ಜನರಲೈಸ್ ಮಾಡೋದೇನ್ರೀ' ಅಂದರು ಗೌರಿ.

''ಅವರು ಹಾಗೆ ಕಾಮೆಂಟ್ ಮಡೋಕೆ ಏನಾದರೂ ಪ್ರೂಫ್ ಇರಬೇಡವೇ''

ಸೊಸೆ ಮಾಡಿಟ್ಟಿದ್ದ ಕೋಡುಬಳೇನೂ, ಮೈಸೂರುಪಾಕನ್ನೂ ತಂದಿದ್ದರು ಜಾನಕಿ. ಅದನ್ನು ತಿನ್ನುತ್ತಾ ರಾಧ ಠರಾವು ಬರೆಯಲಾರಂಭಿಸಿದರು.

''ರೀ ಈ ಜನಗಳಿಗೆ ಇನ್ನೂ ಗೊತ್ತಿಲ್ಲ. ನಾವು ಮನಸ್ ಮಾಡಿದ್ರೆ ಎಂಥಾ ಗುಟ್ಟನ್ನಾದ್ರೂ ಕಾಪಾಡ್ಕೊಂಡು ಬರ್ತೀವೀಂತ''

''ಅದ್ಸರಿ ನೀವು ಯಾವುದಾದರೂ ಗುಟ್ಟು ಬಚ್ಚಿಟ್ಕೊಂಡಿದೀರಾ''

''ಸಂಸಾರ ಅಂದ್ಮೇಲೆ ಗುಟ್ಟಿಲ್ದೆ ಇರುತ್ತಾ. ಇಲ್ಲಿ ಬನ್ನಿ'' ರಾಧ ಇತರರನ್ನು ಹತ್ತಿರಕ್ಕೆ ಕರೆದರು. ''ಈಗ ಏಳೆಂಟು ತಿಂಗಳ ಹಿಂದೆ ನಮ್ಮತ್ತೆ ಗೊಟಕ್ ಅಂದಾಗ ಅವರ್ಹತ್ರ ಇಟ್ಟಿದ್ದ ದುಡ್ಡು ಚಿನ್ನ ಎಲ್ಲ ಸೇರಿ ಹತ್ತಿರ ಹತ್ತಿರ ಎರಡು ಲಕ್ಷದವರೆಗೆ ಬಂತು. ನಾನು ಇದನ್ನ ಯಾರಿಗಾದರೂ ಹೇಳಿದೀನಾ. ಅದೂ ಅಲ್ದೆ ನಮ್ಮೆಜಮಾನರಿಗೆ ಮೊನ್ನೆ ಲಾಟರೀಲಿ ಐದು ಲಕ್ಷ ಬಂತು ಅದನ್ನಾದರೂ ಬಾಯಿ ಬಿಟ್ಟಿದೀನಾ... ಹೇಳಿ. ನಮ್ಮ ಯೋಗ್ಯತೆ ತಿಳೀದೇ ಜನ ಮಾತಾಡ್ತಾರೆ'' ಅಂದವರೇ ರಾಧ ತಟಕ್ಕಂತ ನಾಲಿಗೆ ಕಚ್ಚಿಕೊಂಡರು. ಅನ್ಯಾಯವಾಗಿ ಗುಟ್ಟು ಬಿಟ್ ಬಿಟ್ನಲ್ಲ. ಇನ್ನು ಇವರೆಲ್ಲ ಎಷ್ಟು ಹೊಟ್ಟೆ ಉರ್ಕೋತಾರೋ ಅಂತ ಒಳಗೊಳಗೇ ಕೊರಗಿದರು.

''ನೀವು ಹೇಳೋದು ಸರಿ ರಾಧ. ನಮ್ಮ ನಮ್ಮ ಮನೆ ವಿಚಾರ ನಾವು ಊರಿಗೆ ತಾನೇ ಯಾಕೆ ಬಿಟ್ ಕೊಡಬೇಕು. ಅಲ್ಲ... ಎಲ್ಲರ ಮನೆ ದೋಸೇನೂ ತೂತೇ ಅಲ್ವೇ'' ಅಂದರು ಗೌರಿ. ಎಲ್ಲರೂ ಗೌರಿಯತ್ತ ಕುತೂಹಲದ ನೋಟ ಬೀರಿದರು.

''ಅಲ್ಲ, ನಮ್ಮೆಜಮಾನರಿಗೆ ಎಷ್ಟು ವಯಸ್ಸು ಹೇಳಿ. ಐವತ್ತು ದಾಟ್ತಾ ಬಂತು. ಈಗ ಅವರಿಗೆ ಒಂದು ಹುಡುಗಿ ಜೊತೆ ಅಫೇರ್ ಅಂತೆ.. ಯಾರೋ ಹೇಳಿದ್ದು. ಅದು ನಿಜಾಂತನೂ ಗೊತ್ತಾಯ್ತು. ನಾನು ಅವರೂ ಜಗಳ ಆಡಿದೆವು. ಈಗಲೂ ಅವರು ಆ ಹುಡುಗಿ ಜೊತೆ ಹೋಟೆಲ್ಲು ಸಿನಿಮಾ ಅಂತ ಸುತ್ತುತಿರ್ತಾರಂತೆ. ಇಂಥಾ ಹೊಟ್ಟೆ ಉರಿಯೋ ಸಮಾಚಾರನ ನಾನು ಹೊಟ್ಟೆಯೊಳಗೇ ಇಟ್ಕೊಂಡಿರ್ಲಿಲ್ವಾ, ನಮ್ಮ ಕೆಪಾಸಿಟೀನೇ ಅರಿದೇ ಮಾತಾಡ್ತಾರಲ್ಲ ಜನ'' ಅಂದರು ಗೌರಿ.

ಶ್ರೀಮತಿ ಓಡಿ ಹೋಗಿ ಒಂದ್ಲೋಟ ನೀರು ಗಟಗಟ ಕುಡಿದು ಮಿಕ್ಕವರಿಗೂ ತಂದ್ ಕೊಟ್ರು. ಹಾಗೇ ಎಲ್ಲರ ಮನೇಲೂ ಒಂದಲ್ಲ ಒಂದು ಗುಟ್ಟು ಇದ್ದೇ ಇರುತ್ತೆ ಅಲ್ವೇನ್ರಿ ಶ್ರೀಮತಿ'' ಅಂತ ಕೇಳಿದಳು.

ಈಗ ಶ್ರೀಮತಿ ಸರದಿ. ಗುಟ್ಟುರಟ್ಟು ಮಾಡದ ಸಾಮರ್ಥ್ಯನ ಬೇರೆಯವರು ಪ್ರದರ್ಶನ ಮಾಡ್ದಾಗ ತಾವು ಮಾತ್ರ ಸುಮ್ನೆ ಕೂತ್ರೆ ಹೇಗೆ? ಅವರೂ ಬಿಚ್‌ಕೊಂಡ್ರು ತಮ್‌ಕಥೇನ. ''ಇಲ್ ಕೇಳಿ... ಇದು ಟಾಪ್ ಸೀಕ್ರೇಟ್. ನಮ್ಮೆಜಮಾನ್ರು ಕೆಲಸ ಮಾಡ್ತಿದ್ದ ಆಫೀಸಲ್ಲಿ ಲಂಚ ತಗೊಂಡು ಸಿಕ್ಕಿಕೊಂಡ್ರು. ಆಮೇಲೆ ಅದನ್ನ ರಾಜೀನಾಮೆ ಅಂತ ಮಾಡಿಸಿಬಿಟ್ರು. ಆಮೇಲೆ ಬೇರೆ ಆಫೀಸಲ್ಲಿ ಕೆಲಸಕ್ಕೆ ಸೇರ್ಕೊಂಡ್ರು, ಇದು ಯಾರಿಗಾದರೂ ಗೊತ್ತಾ... ನಂಗೆ ಗೊತ್ತಿದ್ರೂ ನಾನು ಬಾಯಿ ಮುಚ್ಕೊಂಡು ಇರ್ಲಿಲ್ವಾ, ಅಲ್ಲಾ ನಮಗೂ ಸ್ವಲ್ಪ ಕಾಮನ್ ಸೆನ್ಸ್ ಇದೆ ಅಲ್ವಾ'' ಶ್ರೀಮತಿಯ ಮಾತು ಕೇಳಿ ಎಲ್ಲರೂ ಮೂಗಿನ ಮೇಲೆ ಬೆರಳು ಇಟ್ಕೊಂಡ್ರು.

ಜಾನಕಿ ಸ್ವಲ್ಪ ಮುಂದೆ ಬಂದು ''ಈಗ ನಾನು ಹೇಳೋ ವಿಚಾರದ ಮುಂದೆ ನಿಮ್ಮದ್ಯಾವ್ದೂ ಗುಟ್ಟೇ ಅಲ್ಲ... ಈಗ ಹೇಳಿ ಈಗ ಆರು ತಿಂಗಳಿಂದೀಚೆಗೆ ನಾವು ಕಾರು ತಗೊಂಡ್ವಿ, ನಾನು ಒಂದಷ್ಟು ಒಡವೆ ಮಾಡಿಸ್ಕೊಂಡೆ... ಮಕ್ಕಳಿಗೂ ಒಂದುಷ್ಟು ಒಡವೆ ಮಾಡಿಸಿದೆ. ಎಲ್ಲರ ಹೆಸರಲ್ಲೂ ಬ್ಯಾಂಕಲ್ಲಿ ಒಂದಿಷ್ಟು ಡಿಪಾಸಿಟ್ ಇಟ್ಟಿದೀವಿ. ಹಾಗೇ

ಒಂದಾರು ರೇಷ್ಮೆಸೀರೆ ತಗೊಂಡೆ. ಇದೆಲ್ಲ ಹೇಗಾಯ್ತು ಅಂತ ಯಾರಾದ್ರೂ ಹೇಳ್ತೀರ'' ಅಂದು ಸವಾಲೆಸೆದರು.

''ಹೇಗೇಂದ್ರೆ... ಲೋನು ತಗೊಂಡಿರಬೇಕು'' ಅಂದರು ಗೌರಿ.

''ಲೋನು ಇಲ್ಲ. ಬೋನು ಇಲ್ಲ.... ನಾವು ಹೊಸ ಎಕ್ಸ್‌ಟೆನ್ಷನ್‌ನಲ್ಲಿ ಮನೆ ಕಟ್ಟಿಸ್ತಿದೇವಲ್ಲ ಅಲ್ಲಿ ಫೌಂಡೇಷನ್ ತೆಗೆಯುವಾಗ ಒಂದು ಪೆಟ್ಟಿಗೆ ಸಿಕ್ತು. ಅದರ ಭರ್ತಿ ಚಿನ್ನಾಭರಣ ಯಾರಿಗೂ ತಿಳೀದ ಹಾಗೆ ನಂಬಿಕೆ ಇರೋ ಆಚಾರಿ ಹತ್ರ ತಗೊಂಡು ಹೋಗಿ ಅದನ್ನೆಲ್ಲ ಕರಗಿಸಿ ಗಟ್ಟಿಮಾಡಿ ಆಮೇಲೆ ಅನೇಕ ಕಡೆ ಮಾರಿಬಿಟ್ಟೆವು. ಲಕ್ಷಾಂತರ ಬಂತು. ಹೀಗೆ, ಇದು ಯಾರಿಗಾದ್ರೂ ಗೊತ್ತಿತ್ತಾ. ಅಲ್ಲ... ಹೆಂಗಸರು ಮನಸ್ ಮಾಡಿದ್ರೆ ಎಂಥಾ ಗುಟ್ಟಾದ್ರೂ ಒಳಗೆ ಇರುತ್ತೆ ಅನ್ನೋದಕ್ಕೆ ನಾನೇ ಒಂದು ಉದಾಹರಣೆ ಅಲ್ವ'' ಅಂದು ತಮ್ಮ ತೊಡೆ ತಾವೇ ತಟ್ಟಿಕೊಂಡರು ಜಾನಕಿ.

ಪ್ರಾಬ್ಲಮ್ ಆಗಿದ್ದು ಯಾವಾಗ ಅಂದ್ರೆ ಆಭಾಸ ಆಯ್ತು ಅಂತ ಅರಿವಾದಾಗ. ಛಾಲೆಂಜ್ ಮಾಡೋ ನೆಪದಲ್ಲಿ ಅನ್ಯಾಯವಾಗಿ ಮನೆ ಗುಟ್ಟನ್ನು ರಟ್ಟು ಮಾಡಿ ಬಿಟ್ಟೆವಲ್ಲ ಅಂತ ಎಲ್ಲರೂ ಒಳಗೊಳಗೆ ಉರಿದುಕೊಂಡರು,

''ನೋಡ್ರಮ್ಮ ಈಗ ನಾವುಗಳು ಹೇಳಿಕೊಂಡ ವಿಚಾರ ನಮ್‌ನಮ್ಮಲ್ಲೇ ಇರಲಿ'' ಅಂದು ಎಚ್ಚರಿಸಿದರು ಗೌರಿ.

ಸುಮ್ನೆ ಕೂತಿದ್ದ ಸುನಂದನ್ನ ಕೆಣಕಿನ ಜಾನಕಿ

''ಯಾಕೆ ನಿಮ್ದೇನೂ ಇಲ್ಲ'' ಅಂದರು

''ಇಲ್ದೆ ಏನು.. ಎಲ್ರೂ ಕೊಚ್ಕೋತಾ ಇದ್ದದ್ದು ನೋಡಿ ಸುಮ್ನೆ ಇದ್ದೆ. ನಂಗೊತ್ತು ನನ್ನ ಸರದಿ ಬಂದೇ ಬರುತ್ತೆ ಅಂತ''

''ಅಂದ್ರೆ ನೀವು ಏನಾದ್ರೂ ಬಚ್ಚಿಟ್ಕೊಂಡಿದೀರಾ'' ಗೌರಿ ಕೇಳಿದರು.

''ನಾನು ಸಂಘದ ಸದಸ್ಯಳಾಗಿ ಅಷ್ಟೂ ಮಾಡದಿದ್ರೆ ಹೇಗೆ?''

''ಏನ್ರಿ ಅದು ಹೇಳ್ರಿ'' ಒತ್ತಾಯಿಸಿದಳು ರಾಧ

''ವಾರಕ್ಕೊಂದೆರಡು ಸಾರಿ ನಮ್ಮನೆಗೆ ಬರ್‍ತಾರಲ್ಲ ಅವರ್‍ಯಾರು ಹೇಳಿ''

''ಅದೇ ಯಾವಾಗಲೂ ಬಿಳಿ ಪ್ಯಾಂಟು.... ಬಿಳಿ ಷರ್ಟು''

''ಹೌದು''

''ಮಧ್ಯಾನ್ಹದ ಹೊತ್ತು ಬಂದು ಸಂಜೆವರೆಗೂ ಇರ್‍ತಾರಲ್ಲ''

''ಹೌದು ಅವರೇ''

''ನಿಮ್ಮ ಕಸಿನ್ನೋ ಏನೋ ಅಂದಿದ್ರಲ್ಲ''

''ಕರೆಕ್ಟಾಗಿ ಹೇಳಿದ್ರಿ''

''ನಿಮಗೆ ಯಾವಾಗಲೂ ಪ್ರೆಸೆಂಟ್ ತಂದು ಕೊಡ್ತಿರ್‍ತಾರೆ ಅಂದ್ರಲ್ಲ''

''ಹೌದು ಕಣ್ರಿ... ಅವರ್‍ಯಾರೂಂತ ಹೇಳ್ಲಾ''

''ಹೇಳ್ರಿ ಯಾರ್ರೀ ಅದು''

''ನನ್ನ ಲವರ್ರು ಕಣ್ರೀ... ಮದುವೆಗೆ ಮುಂಚೆಯಿಂದ ನನ್ನ ಇಷ್ಟಪಟ್ಟಿದ್ರು. ಏನೋ ಕಾರಣಕ್ಕೆ ಮದುವೆ ಆಗ್ಲಿಲ್ಲ. ಆದ್ರೇನಂತೆ ಈಗ್ಲೂ ಒಬ್ಬರನೊಬ್ಬರು ತುಂಬಾ ಇಷ್ಟ ಪಡ್ತೀವಿ'' ಅಂತ ಸುನಂದ ಹೇಳ್ತಿದ್ದ ಹಾಗೇ ಸಂಘದಲ್ಲಿ ಕರೆಂಟು ಹೋಯ್ತು. ಸುನಂದ ಬಿಟ್ಟು ಇನ್ನೆಲ್ರೂ ಮೈತುಂಬಾ ಸೆರಗು ಹೊದ್ದರು.

''ಅಲ್ಲ ಕಣ್ರೀ ಎಷ್ಟು ದಿವಸದಿಂದ ಹೀಗೆ ನಡೀತಾ ಇದ್ರೂ ಇದು ಯಾರಿಗಾದರೂ ಗೊತ್ತಿತ್ತಾ. ನಾನು ಈ ಗುಟ್ಟನ್ನು ಹಾಗೇ ಬಚ್ಚಿಟ್ಕೊಂಡಿಲ್ವಾ..'' ಅಂತ ಸುನಂದ ಮಾತಾಡ್ತಾನೆ ಇದ್ದರು. ಹೋಗಿದ್ದ ಕರೆಂಟು ಬಂತು. ಆದರೆ ಕೂತಿದ್ದವರು ಎದ್ದು ಹೋಗಿದ್ದರು. ಆಗಲೇ ಸುನಂದಂಗೆ ತುಟಿ ಜಾರಿದ ಮಾತಿನ ಅರಿವಾಗಿದ್ದು. ಎಂಥಾ ಅನಾಹುತ ಆಯ್ತು ಅಂದ್ಕೊಂಡ್ರು.

ಈ ಸಭೆ ಮುಗಿದ ಮೇಲೆ ಈ ಪಂಚ ಮಹಿಳೆಯರು ಪರಸ್ಪರ ಮುಖ ನೋಡ್ತಿಲ್ಲ, ಮಾತಾಡ್ತಿಲ್ಲ. ಒಬ್ಬರ ಬೆನ್ನು ಇನ್ನೊಬ್ಬರು ನೋಡ್ಕೊಂಡು ಕಾಲ ಕಳೀತಿದಾರೆ.

ಸ್ವಲ್ಪ ದಿವಸಗಳಲ್ಲೇ ಒಬ್ಬೊಬ್ಬರಾಗಿ ವಠಾರ ಖಾಲಿ ಮಾಡಿ ನಗರದ ನಾನಾ ದಿಕ್ಕಿಗೆ ಚೆದುರಿ ಹೋದರು. ಈಗ ಅವರ್ಯಾರಿಗೂ ಗುಟ್ಟಿನ ಯೋಚನೆ ಇಲ್ಲ. ಗುಟ್ಟು ರಟ್ಟಾದುದರ ಬಗೆಗೆ ಬಾಧೆಯೂ ಇಲ್ಲ.



''ಬೇಯ್ಲ್ ಸಿಕ್ತು ಅಂತ ಸುಮ್ನೆ ಕೂತ್ಕೊಬೇಡಿ. ಹೋಗಿ ಸಂಪಾದಿಸ್ಕೊಂಡು ಬನ್ನಿ''

ನಿಯಮಕ್ಕೊಂದು ನಿಯಮ

ಹೆಚ್.ಎ. ವೆಂಕಟಸುಬ್ಬಯ್ಯ

ನಾನು ಮೊನ್ನೆ ಅಂದರೆ ನಿನ್ನೆಗೆ
ಒಂದು ದಿನ ಹಿಂದೆ,
ಅವತ್ತೇ ಕಳುಹಿಸ ಬೇಕಿತ್ತು
ಪೂರೈಸಿ ನಿಮ್ಮ ಷರತ್ತು

''ಹಾಳೆಯ ಒಂದೇ ಮಗ್ಗುಲಲಿ
ಸ್ಫುಟವಾಗಿ ಇಲ್ಲಾ
ಟೈಪುಮಾಡಿ'' ಎಂದು
ಜೊತೆಗೆ ''ಸ್ವಂತ ವಿಳಾಸದ
ಸ್ಟಾಂಪು ಹಚ್ಚಿ
ಕವರು, ಬೇಕಿದ್ದರೆ
ನಿಮ್ಮ ಅಸ್ವೀಕೃತ ಕೃತಿ'' ಎಂದು

''ಬರಹಗಳ ಸಾಲುಗಳು
ಇಷ್ಟಕ್ಕು ಮೀಸಲಿರಬೇಕು'' ಎಂದು

ಆಗದು ಆಗದು ಸ್ವಾಮಿ
ನೀವು ಕೊಟ್ಟ ಅಳತೆಗೆ
ಚಡ್ಡಿ ಹೊಲಿಯುವ ಕೆಲಸ;
ಕಿತ್ತಹಲ್ಲುಗಳ ಜಾಗದಲ್ಲಿ
ಮುವತ್ತೂ ಮತ್ತೆರಡು
ಹಲ್ಲುಗಳ ಮೆತ್ತುವ ಕೆಲಸ
ಭಾವನೆಗಳು ಹೋದಂತೆಯೇ
ಹರಿಬಿಡುವ, ಬೀಗುವ ನಮ್ಮ
ಜಾಯಮಾನಕೆ ಒಗ್ಗುವ ಕೆಲಸ
ನೀವು ಕೊಟ್ಟ ಗೇಣುದ್ದ ದಾರದಲ್ಲಿ
ಇಷ್ಟೇ ಮಣಿಗಳನು
ಪೋಣಿಸುವ ಕೆಲಸ

ಈ ನಾನು ಮಾಡುವ ಕೆಲಸ
ಇಷ್ಟೇ ನೋಡಿ ಸ್ವಾಮಿ
ಸ್ಟಾಂಪು ಹಚ್ಚಿದ ಸ್ವಂತ ವಿಳಾಸದ
ಕವರನು ಜೊತೆಗೆ
ಕಳುಹಿಸುವ ಕೆಲಸ

ಬದಲಿ ವ್ಯವಸ್ಥೆ

ಡಾ॥ ಗೋವಿಂದ್ ಹೆಗ್ಡೆ

ಹಾಗೆ ನೋಡಿದರೆ, ನಮ್ಮ ರಾಮೂ ಕಾಕ ತುಂಬ ಒಳ್ಳೆಯವರು. ಬೇರೆಯವರ ಬಗ್ಗೆ ತುಂಬ ಮರುಕ ಅವರಿಗೆ. ಇತರರಿಗೆ ಸಹಾಯ ಮಾಡಲು ಅವರು ಸದಾ ಸಿದ್ಧ. ಹಾಗೆ ಸದಾ ಹೇಳುವುದು - ಹೇಳುತ್ತಲೇ ಇರುವುದೂ ಅವರ ಲಕ್ಷಣಗಳಲ್ಲಿ ಒಂದು. ಇರಲಿ ಬಿಡಿ.

ಮೊನ್ನೆ ಅಪರಾಹ್ನ - ಮೂರು ಗಂಟೆಯ ಸುಮಾರು ಬಿರು ಬಿಸಿಲು. ಮನುಷ್ಯ ನಮ್ಮ ಮನೆಗೆ ಬಂದರು. ಜರ್ಬಿನ ದಿರಿಸು. ಒಳ್ಳೆಯ ಊಟ ಹೊಡೆದು ಎಲೆ ಅಡಿಕೆ ಹಾಕ್ಕೊಂಡು ಬಂದ ಹಾಗಿತ್ತು. ನಾನೇ ಕೇಳ್ದೆ ''ಏನ್ ಕಾಕ, ಯಾವ್ದೋ ಮದ್ವೆ ಊಟ ಮುಗಿಸ್ಕೊಂಡು ಬಂದ ಹಾಗಿದೆ'' ಅಂತ. ಅವರು ಹೇಳಿದ್ರು ''ಹ್ಞೂಂ, ಕಣೋ ಗೋಪಿ. ನಂ ಸುಬ್ಬು ಇಲ್ವೇ, ಅವನ ಮಗ ಶೀನೀದು ಈವತ್ತು ನಿಶ್ಚಿತಾರ್ಥ. ಸುಬ್ಬುಗೆ ಅದೇನೋ ಆಫೀಸಿನಲ್ಲಿ ಅರ್ಜೆಂಟಾಗಿ ಇನ್‌ಸ್ಪೆಕ್ಷನ್ನೋ ಮತ್ತೊಂದೋ ಬಂದು ಬಿಟ್ತಂತೆ. ಅವ್ನ ಆಫೀಸರ್ರು ಬೇರೆ ಸ್ಕೂಟರಿಂದ ಬಿದ್ದು ಕಾಲು ಮುರ್ಕೊಂಡು ಮಲಗಿದಾನೆ. 'ರಾಮು, ನೀನೇ ಹೋಗಿ ಬಾ ಶಾಸ್ತ್ರಿಗಳ ಜತೆ - ಶೀನನ್ನ ಕರ್ಕೊಂಡು. ನಂಗೆ ಸಾಧ್ಯವಾದ್ರೆ ಊಟದ ಹೊತ್ತಿಗೆ ಬರ್ತೀನಿ' ಅಂತ ಅಂದ. ಹೋಗಿ ಊಟ ಮಾಡ್ಕೊಂಡು ಬಂದೆ'' ಅಂತ.

ಮೊದಲೇ ಹೇಳಿದ್ನಲ್ಲ ನಂ ರಾಮೂ ಕಾಕ ಪರೋಪಕಾರಿ. ಆದ್ರೆ ನಮ್ಮಗಳ ಬಾಯಿ ಸುಮ್ಮಿರಬೇಕಲ್ಲ. ಹಾಗೆ ಚಿಕ್ಕ ಪುಟ್ಟ ಕಟಕಿಗೆ ನಮ್ಮ ತಂದೆಯವರೂ ಹಿಂದೆ ಬೀಳುವವರಲ್ಲ. ಅದೂ ಈಗ ತಾನೇ ರಿಟೈರ್ ಆದವರು ಬೇರೆ! ಮೊದಲ ಬಾಣ ಅವರಿಂದಲೇ. ''ರಾಮೂ, ಈವತ್ತೇನೋ ಹೋಗ್ಬಂದೆ, ಸರಿ. ಆದ್ರೆ ನಾಳೆ ಮದುವೇಲೂ ಸುಬ್ಬು ಬದ್ಲು ನೀನೇ ವರನ ಜತೆ ಮಣೆ ಮೇಲೆ ಕೂತು ಬಿಟ್ಟೀಯಾ'' ಅಂದ್ರು.

ರಾಮೂ ಕಾಕ ವರನ ತಂದೆಯ 'ಬದಲಿ' ಪಾತ್ರದ ಬಗ್ಗೆ ಯೋಚಿಸಿದ್ರೋ ಗೊತ್ತಿಲ್ಲ. ನಮಗಂತೂ ಒಂದೊಂದೇ 'ಬದಲಿ' ಪಾತ್ರಗಳು ಗೋಚರಿಸತೊಡಗಿದ್ದಂತೂ ಹೌದು!

ಮುಂದಿನ ಬಾಣ ನಂದು. 'ಅಲ್ಲ ಕಾಕಾ, ವರನ ತಂದೆ ಅಂದ್ರೆ ಸುಬ್ಬು ಮಾಮನ ಬದಲಿಗೆ ಮಣೆ ಮೇಲೆ ಕೂತರೇನೋ ನಡಿಯುತ್ತೆ, ಪರ್ವಾಗಿಲ್ಲ, ಆದ್ರೆ ಶೀನನ ಬದಲಿಗೆ ಹಸೆಮಣೇನ ಏರಿದ್ರೆ... ಏನ್ ಗತಿ' ಅಂದೆ.

ರಾಮೂ ಕಾಕ ಇನ್ನೊಂದು ಸಲ ಎಲೆ ಅಡಿಕೆ ಹಾಕ್ಕೊಳ್ಳೋ ತಯಾರಿಯಲ್ಲಿದ್ರು. ನನ್ನ ಮಾತು ಕೇಳಿಸದೇ ಇರಬಹುದು. ಜಾಣ ಕಿವುಡು ಅಂತ್ಲೆ ಹೇಳೋದು ಯಾಕೆ?

ಮುಂದಿನ ಸರದಿ ಅಣ್ಣಂದು. ''ಇರ್ಲಿ ಬಿಡೋ ಗೋಪಿ, ಶೀನನ ಬದಲಿಗೆ ಕೂತು ತಾಳಿ ಕಟ್ಟಿದ್ರೂ ಅನ್ನು ನಷ್ಟ ಏನೀಗ.... ಪ್ರಸ್ತ ಮಾತ್ರ ಶೀನನೇ....''

'ಏನು ಮಾತಾಡ್ತೀರೋ, ಪೋಲಿ ಹುಡುಗ್ರಾ' ಅಮ್ಮ ಗದರಿದ್ದರಿಂದ 'ಬದಲಿ' ಮಾತುಗಳಿಗೆ ಬ್ರೇಕ್ ಬಿತ್ತು. ಎಲೆ ಅಡಿಕೆ ಬಾಯಲ್ಲಿ ತುಂಬ್ಕೊಂಡು ಕೆನ್ನೆಯುಬ್ಬಿಸಿ

'ಬರ್ತೀನಿ' ಅಂತ ಹೇಳಿ ಕಾಕ ಹೊರಟೋದ್ರು.

ಕಾಕ ಹೋದ್ಮೇಲೂ, ನಮ್ಮ ನಮ್ಮಲ್ಲಿ 'ಬದಲಿ' ಬಗ್ಗೆ ಮಾತಂತೂ ಮುಂದುವರೀತು. ಅಣ್ಣ 'ನನ್ ಎಂಗೇಜ್‌ಮೆಂಟಿಗೆ, ಮದುವೆಗೆ ಯಾವುದಕ್ಕೂ ಕಾಕನ ಕರೆಯಲ್ಲಪ್ಪ. ಸ್ವಲ್ಪ ಲೇಟಾದ್ರೂ, ಅಥವಾ ನಾನು ಟಾಯ್ಲೆಟ್ಟಿಗೆ ಹೋದ್ರೂ, ಕಾಕ ನನ್ ಬದಲಿಗೆ ತಾವೇ ಮದುವೆ ಮಾಡ್ಕೊಂಬಿಟ್ರೆ' ಅಂತ ಘೋಷಣೆ ಮಾಡಿಯೂ ಆಯ್ತು.

ಅಂತೂ ಈ 'ಬದಲಿ' ವ್ಯವಸ್ಥೆ ಅನ್ನೋದು ಒಂದು ಪಿಡುಗೇ ಆಗಿಬಿಟ್ಟಿದೆ. ಯಾವುದೇ ಕಛೇರಿಗೆ ಹೋಗಿ ನೋಡಿ. ನಮಗೆ ಬೇಕಾದ ವ್ಯಕ್ತಿ 'ಕನ್‌ಸರ್ನ್ಡ್ ಕೇಸ್ ವರ್ಕರ್' (Concerned case worker - ಅವ್ನಿಗೆ ನಮ್ಮ ಪಾಡಿನ ಬಗ್ಗೆ ಯಾವುದೇ concern ಇರಬೇಕಾಗಿಲ್ಲ!) ಅಥವಾ ಆಫೀಸರ್ ಇರೋದೇ ಇಲ್ಲ. ಅವರನ್ನ ಇನ್ಯಾರದೋ ಬದಲಿಗೆ ಇನ್ನೆಲ್ಲಿಗೋ ಡ್ಯೂಟಿಗೆ ಹಾಕಿರ್ತಾರೆ. ಅದಕ್ಕೆ 'ಡೆಪ್ಯುಟೇಶನ್' 'ಇನ್‌ಚಾರ್ಜ್' ಅನ್ನೋ ಭಾರದ ಹೆಸರು ಬೇರೆ. ಅವರ ಬದಲಿಗೆ ಇಲ್ಲಿ ಇನ್ಯಾರೋ ತಲೆಬುಡ ತಿಳಿದಿರದ ವ್ಯಕ್ತಿ ಇರ್ತಾನೆ. 'ನಾಳೆ ಬನ್ನಿ' ಅನ್ನೋ ಉತ್ತರ ಸಿದ್ಧ ಆಗಿರತ್ತೆ. (ನಂಗಂತೂ ಈ 'ನಾಳೆ ಬನ್ನಿ' ಉತ್ತರ ಕೇಳಿದ್ರೆ ಮೈ ಉರಿಯುತ್ತೆ. ಭಿಕ್ಷುಕರಿಗೆ 'ಮುಂದೆ ಹೋಗು' ಎಂದು ಉತ್ತರ ಕೊಟ್ಟ ಹಾಗೇ ಇದೂ.)

ನಮ್ಮ ಸ್ನೇಹಿತರೊಬ್ರು, ತಮ್ಮ ಅನುಭವ ಹೇಳ್ತಿದ್ರು. ಒಮ್ಮೆ ಅವರು ಏನೋ ಕಾರಣಕ್ಕಾಗಿ ಸರಕಾರಿ ಆಸ್ಪತ್ರೆಯ ವೈದ್ಯರೊಬ್ಬರನ್ನು ಅರ್ಜೆಂಟಾಗಿ ನೋಡಬೇಕಾಗಿತ್ತು. ಆಸ್ಪತ್ರೆಗೆ ಹೋದ್ರೆ ಅಲ್ಲಿ ಹೇಳಿದ್ರಂತೆ - ಅವ್ರು ಇನೊಂದು ಆಸ್ಪತ್ರೆಯ ಇನ್‌ಚಾರ್ಜ್. ಅಲ್ಲಿಗೆ ಹೋಗಿದಾರೆ. ಇಲ್ಲಿ ಅವ್ರ ಬದಲಿಗೆ ಬೇರೆಯವ್ರು ಡ್ಯೂಟಿ ಮೇಲಿದಾರೆ- ಅಂತ. ಇವ್ರಿಗೆ ತುರ್ತು ಕೆಲಸವಿತ್ತಲ್ಲ. ಸರಿ, ಹದಿನೈದೋ ಇಪ್ಪತ್ತೋ ಕಿ.ಮೀ. ದೂರದ ಹಳ್ಳಿಯ ಆ ಆರೋಗ್ಯ ಕೇಂದ್ರಕ್ಕೆ ಸ್ಕೂಟರ್ ತಗೊಂಡು ಹೋದ್ರು, ಅಲ್ಲಿ ನೋಡಿದರೆ ವೈದ್ಯರಿಲ್ಲ. ಅವ್ರ ಕುರ್ಚಿಯಲ್ಲಿ ಒಬ್ಬ ಜಬರ್ದಸ್ತಾಗಿ ಕೂತು ರೋಗಿಗಳಿಗೆ ಇಂಜಕ್ಷನ್ ಚುಚ್ಚೋದು, ಔಷಧ ನೀಡೋದು ಮಾಡ್ತಿದಾನೆ. (ಡಾಕ್ಟರರ 'ಬದಲಿ'!) ವಿಚಾರಿಸಿದ್ರೆ ಆತ ಆಸ್ಪತ್ರೆಯ 'ಡಿ' ವರ್ಗದ ಸಿಬ್ಬಂದಿ. (ಬಹಳ ಮರ್ಯಾದೆಯ ಶಬ್ದ ಅದು. ಸರಳವಾಗಿ - ಒರಟಾಗಿ ಹೇಳೋದಾದ್ರೆ, ಆತ 'ಜವಾನ'. ಡಾಕ್ಟರರ ಬದಲಿಗೆ 'ಕಾಂಪೌಂಡರು'ಗಳೇ ಡಾಕ್ಟರಾಗೋದು ಹಳ್ಳಿಗಳಲ್ಲಿ ಹೊಸದಲ್ಲ!) ಅವನನ್ನು ಕೇಳಿದಾಗ ತಿಳಿದದ್ದು - ಆ ಆಸ್ಪತ್ರೆಯ ಪಕ್ಕದ ಆರೋಗ್ಯ ಕೇಂದ್ರದಲ್ಲಿ 'ಕಣ್ಣಿನ ಪೊರೆ'ಯ (ಕ್ಯಾಟರಾಕ್ಟ್) ಆಪರೇಶನ್ ಕ್ಯಾಂಪಿದೆ ಸದ್ಯದಲ್ಲೇ ಅದರ ವ್ಯವಸ್ಥೆಯ ಬಗ್ಗೆ ಈ ಡಾಕ್ಟರಿಗೂ ಕರೆ ಬಂತು - 'ಮೀಟಿಂಗಿಗೆ ಬನ್ನಿ' ಅಂತ. ಹೋಗಿದಾರೆ ಅಂತ ಗೊತ್ತಾಯ್ತು.

ಅಲ್ಲಿಗೆ ಹೋಗಿ ಅಲ್ಲಿ ಇನ್ನೂ ಏನೇನೋ ಬದಲಿ ವ್ಯವಸ್ಥೆಗಳನ್ನು ಎದುರಿಸುವ ಧೈರ್ಯವಾಗದೆ ಇವರು ವಾಪಾಸಾದ್ರು.

ಹಲವು ಸಲ ನಂಗೆ ಗುಮಾನಿ ಬಂದಿದ್ದಿದೆ. ಈ 'ಬದಲಿ' ಅನ್ನೋದು 'ಅಸಲಿ'ನ ತುಂಬ ಸಮರ್ಥವಾಗಿ ರಕ್ಷಿಸುತ್ತೆ ಅರ್ಥಾತ್ ಶೀಲ್ಡ್ ಮಾಡತ್ತೆ. ಜೊತೆಗೇನೇ ಆಗುವ

ಕೆಲಸ ಆಗದ ಹಾಗೆ ಕೂಡ ಮಾಡುತ್ತೆ - ಅಂತ. ಹೇಗೆ ಅಂತೀರಾ?

ನಮ್ಮ ಸರ್ಕಾರಿ ಕಛೇರಿಗಳನ್ನೇ ತೆಗೆದುಕೊಳ್ಳಿ. ಯಾವುದೋ ಇಲಾಖೆ - ಅದಕ್ಕೊಬ್ಬ ಮಂತ್ರಿ. ಅವ್ರಿಗೆ ಕೆಲಸ ಮಾಡುವಷ್ಟು ಬಿಡುವಿಲ್ಲ. ಅದಕ್ಕಾಗಿ ಒಬ್ಬ 'ಡೆಪ್ಯುಟಿ', 'ಅಂಡರ್', 'ಅಸಿಸ್ಟೆಂಟ್' ಸೆಕ್ರೆಟರಿಗಳು ಅವರ 'ಆಪ್ತ' ಸಹಾಯಕರು. ಅವ್ರಿಗೆ 1, 2, 3, 4 ಹೀಗೆ ಬಾಲಂಗೋಚಿಗಳು ಬೇರೆ. ಅಲ್ಲಿಂದ ಕೆಳಗಿನ ನೂರೆಂಟು ಹಂತಗಳಲ್ಲಿ ಆಫೀಸರುಗಳು, ಸೂಪರಿಂಟೆಂಡೆಂಟುಗಳು, ಸೆಕ್ಷನ್ ಆಫೀಸರುಗಳು..... ಗುಮಾಸ್ತರುಗಳು... ಇವರ ಹೈರಾರ್ಕಿ (heirarachy) ನಂಗೆ ಯಾವತ್ತೂ ಅರ್ಥವಾಗಿಲ್ಲ.


ಅಕಸ್ಮಾತ್ ಒಂದು ಫೈಲು ಈ ವ್ಯೂಹದಲ್ಲಿ ಯಾತ್ರೆ ಹೊರಟಿತು ಅನ್ನಿ. ಎಷ್ಟೆಲ್ಲ ಮೆಟ್ಟಿಲು ಹತ್ತಿ, ಕಂಬಸುತ್ತಿ, ಹಂತ (ಶರ) ದಾಟಿ, ನೂರೆಂಟು ಆಕ್ಷೇಪ, ಕೊಕ್ಕೆ, ಕುಣಿಕೆಗಳಿಗೆ ಕೊರಳೊಡ್ಡಿ, ಸಾವಿರ ಟಿಪ್ಪಣಿಗಳ ಮೈತುಂಬ ಚುಚ್ಚಿಸಿಕೊಂಡು ಮತ್ತೆ ಮೆಟ್ಟಿಲು ಮೆಟ್ಟಿಲು ಮೆಟ್ಟಿಲಾಗಿ ಇಳಿದು (ಮಧ್ಯೆ ಮಧ್ಯೆ ದಣಿವಾರಿಸಿಕೊಂಡು - ಪಾಪ, ಅದಕ್ಕೂ ಸುಸ್ತಾಗಿರಲ್ವೆ?) ನಿಮ್ಮ ಕೈಸೇರೋ ಹೊತ್ತಿಗೆ ಕೇಸು ನೆಗೆದು ಬಿದ್ದು ಹೋಗಿರುತ್ತೆ. ಸಾಲದ್ದಕ್ಕೆ ಗಾಯದ ಮೇಲೆ ಉಪ್ಪು ಸವರುವ ಆಟ ಬೇರೆ. 'ಆ... ಆಫೀಸಲ್ಲಿ ಶ ಚ ಟ ಪ ರಾಯರು ಇರ್ಲಿಲ್ಲ. ರಜೆ ಮೇಲಿದ್ರು. ಅವ್ರ ಬದಲುನ್ಯಾರೋ ಚಾರ್ಜ್ ತಗೊಂಡಿದ್ರು. ಅವ್ರೇ ಇದ್ದಿದ್ರೆ... ನಿಂ ಕೆಲ್ಸ ಚಿಟಿಕೆ ಹೊಡೇಯೋದ್ರಲ್ಲಿ ಆಗಿರೋದು (?!)'

ಹೀಗೆಲ್ಲ 'ಬದಲಿ'ಗಳ ಬಗ್ಗೆ ಬದಲಿ ವ್ಯವಸ್ಥೆಯ ಬಗ್ಗೆ ಚರ್ಚೆ ಮಾಡ್ತಿರೋವಾಗ್ಲೆ ಇನ್ನೊಂದು 'ಶಾಕಿಂಗ್' ಸುದ್ದಿ ಬಂತು. ಅದೇ 'ಕ್ಲೋನ್'ಗಳದ್ದು. ಆ ವಿಜ್ಞಾನಿ ಹೇಳ್ತಾನೆ 'ಒಬ್ಬ ವ್ಯಕ್ತಿಯ ಥರಾನೇ ಇರೋ ಮನುಷ್ಯರನ್ನ ನೋಟು ಅಚ್ಚು ಹಾಕಿದಷ್ಟು ಸುಲಭವಾಗಿ ಸೃಷ್ಟಿಸಬಹುದು' ಅಂತ. ಅದೇನಾದ್ರೂ ಸಾಧ್ಯವಾದ್ರೆ ಈ 'ಬದಲಿ' ಕಾಟ ಎಷ್ಟು ಬಿಗಡಾಯಿಸಬಹುದು ಅಂತ ಯೋಚಿಸಿದ್ರೆ - ಭಯವಾಯ್ತು.

ಅದೇ ಯೋಚನೇಲಿ ಮಲಗಿದ್ರೆ ಕನಸು ಬಿತ್ತು.

ನಾನೊಬ್ಬ ದೊಡ್ಡ ಅಧಿಕಾರಿ. ಹೆಂಡತಿ ಜತೆ (ನಂದೇ ಹೆಂಡತಿ ಜೊತೆ!) 'ಹನಿಮೂನ್'ಗೆ ಹೋಗ್ಬೇಕು. ರಜೆ ಇಲ್ಲ - ಎಂಥದೋ ತುರ್ತಿನ ಸ್ಥಿತಿ ಬೇರೆ. ಸೋ.... ನನ್ನ 'ಕ್ಲೋನ್' ಮಾಡಲು 'ಆರ್ಡರ್' ಕೊಡ್ತೀನಿ. ಕ್ಲೋನ್ 'ರೆಡಿ' ಆಗಿದೆ. ನನ್ನದೇ ಡ್ರೆಸ್ ಹಾಕಿ ಖುರ್ಚಿಯಲ್ಲಿಕೂಡಿಸಿ ಮರುದಿನ ಬೆಳಿಗ್ಗೆ ಬೇಗ ಎದ್ದು ಹೊರಡುವ ಯೋಜನೆಯಲ್ಲಿ ಮಲಗ್ತೀನಿ. ಬೆಳಿಗ್ಗೆ ಎದ್ದು ನೋಡಿದ್ರೆ ನನ್ ಹೆಂಡತಿ ಪತ್ತೆ ಇಲ್ಲ! ಕೆಲಸದವನ್ನ ಕೇಳಿದ್ರೆ ''ನೀವು - ನಿಂ ಹೆಂಡತಿ ಆಗ್ಲೇ ಹೋದ್ರಲ್ಲ ಸರ್. ನೀವು ನೀವೇನೋ ಅಥವಾ ಕ್ಲೋನೋ?''

'ನಾನು ನಾನೇ! ಕ್ಲೋನ್ ಅಲ್ಲ! ಬದಲಿಗಳಿಗೆ ಧಿಕ್ಕಾರ' ಅಂತ ಕೂಗೋ ಹೊತ್ತಿಗೆ - ಎಚ್ಚರಾಗಿ ಬಿಡ್ತು!



Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.